ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ
# ಸೂರ್ಯ ಪ್ರಗತಿ
SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue:20 Date: 27-01-2026 Tuesday RNI NO : KARKAN/2021/80805 L2/RNP-1285/TMR/2025-27 Page :4 Price: 1.00
ಸಂಪುಟ: 05 ಸಂಚಿಕೆ: 20 ಪುಟ : 4 ಬೆಲೆ: 1.00 ರೂ

# ನಾಡಿನ ಜನರ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ: ಪರಂ

ತುಮಕೂರು: ನಾಡಿನ ಜನರ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ನಮ್ಮ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಮೂಲಕ ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿಯತ್ತ ಕೊಂಡೊಯ್ಯಲು ಸಂಕಲ್ಪ ಮಾಡಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದರು.

ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಿದ್ದ 77ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ 5. ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದ ಅವರು ರಾಜ್ಯದ ಎಲ್ಲ ವರ್ಗದ ಜನರ ಕಲ್ಯಾಣಕ್ಕಾಗಿ ಸರ್ಕಾರ ಕಂಕಣ ಬದ್ಧವಾಗಿದೆ. ಕನ್ನಡ ನಾಡು-ನುಡಿ ಮತ್ತು ಜನರ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಕೆಲಸ ಮಾಡುತ್ತಿದ್ದು, ನಾಡಿನ ಜನರ ಶ್ರೇಯೋಭಿವೃದ್ಧಿಯೇ ನಮ್ಮ ಗುರಿ ಎಂದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ರಾಜ್ಯದ ಬಡಜನರ ಏಳಿಗಾಗಿ ಹಲವಾರು ನುಡಿದಂತೆ ನಡೆದಿದ್ದೇವೆ ಎಂದು ಅವರು ಹೇಳಿದರು.ನಮ್ಮ ಸರ್ಕಾರ ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮೀ ಹಾಗೂ ಯುವನಿಧಿ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದರು.





ಸರ್ವತಂತ್ರ ಗಣತಂತ್ರ ವ್ಯವಸ್ಥೆಯಲ್ಲಿ ನಾವಿದ್ದೇವೆ. ಸಂವಿಧಾನವೇ ನಮ್ಮ ಧರ್ಮ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಸೇರಿದಂತೆ ಹಲವಾರು ಮಹಾನ್ ನೇತಾರರ ಶ್ರಮ ಹಾಗೂ ಬಲಿದಾನದಿಂದ ಪಡೆದಿರುವ ನಮ್ಮ ದೇಶದ ಸ್ವಾತಂತ್ರ್ಯವನ್ನು ಸ್ವೇಚ್ಛೆಯೆಂದು ಭಾವಿಸಬಾರದ ಪ್ರಜಾಪ್ರಭುತ್ವ ತಳಹದಿಯಲ್ಲಿ ನಿಂತಿರುವ ಭಾರತದ ಸ್ವಾಭಿಮಾನವನ್ನು ನಾವೆಲ್ಲರೂ ಎತ್ತಿ ಹಿಡಿಯಬೇಕು ಎಂದು ಳಿಸಿದರು.

ಭಾರತ ಒಕ್ಕೂಟ ವ್ಯವಸ್ಥೆಯಲ್ಲಿ ಶಾಂತಿ, 2065 ಸಹಬಾಳ್ವೆ ಮೂಲಭೂತವಾಗಿದೆ ಸಂವಿಧಾನದ ಆಶಯದಡಿಯಲ್ಲಿ ಸಮೃದ ಹಾಗೂ ಬಲಿಷ್ಟ ಭಾರತ ನಿರ್ಮಾಣ ಮಾಡಲು ನಾವೆಲ್ಲರೂ ಸಂಕಲ್ಪ ಮಾಡೋಣ ಎಂದರು.

1950ರ ಜನವರಿ 26 ರಂದು ಭಾರತೀಯರಾದ ನಾವೆಲ್ಲರೂ ಅತ್ಯಂತ ಹೆಮ್ಮೆಪಡುವಂತಹ ದಿನ. ಶತ ಶತಮಾನಗಳ ಸ್ವಾತಂತ್ರ್ಯದ ಕನಸು ಪರಿಪೂರ್ಣವಾಗಿ ಸಾಕಾರಗೊಂಡ ದಿನ ಭಾರತ ಸರ್ವತಂತ್ರ ಸ್ವತಂತ್ರವಾದ ದಿನ. ಭಾರತೀಯ ಸ್ವತಂತ್ರದ ಕನಸನ್ನು ನನಸಾಗಿಸಿ ಅವರ ಹಕ್ಕು ಮತ್ತು ಕರ್ತವ್ಯಗಳನ್ನು ಮಾನವೀಯ ಮೌಲ್ಯಗಳೊಂದಿಗೆ ಭಾರತೀಯರೆಲ್ಲರಿಗೂ ಸರ್ಮ ಸಮ್ಮತವಾಗುವಂತೆ ರೂಪಿಸಿ, ಸಂವಿಧಾನದ ರೂಪದಲ್ಲಿ ಜಾರಿಗೊಳಿಸಿದ ದಿನವಾಗಿದೆ ಎಂದು ಅವರು ಹೇಳಿದರು.

ಉತ್ತಮ ಆದರ್ಶ ಮೌಲ್ಯಗಳನ್ನು ಹೊಂದಿರುವ ಬೃಹತ್ ಸಂವಿಧಾನವನ್ನು ಅಂಗೀಕರಿಸಿ ಸ್ವಾತಂತ್ರ್ಯ ಎಂದರು. ಆಡಳಿತದ ಪ್ರಮುಖ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಗೆ ಗುರುತಿಸಲಾಗಿದೆ. ಭಾರತ ಸಂವಿಧಾನವು ಪ್ರಪಂಚದ ಇತರೆ ರಾಷ್ಟ್ರಗಳಿಗೆ ಮಾದರಿಯಾದ ಸಂವಿಧಾನವಾಗಿದೆ ಎಂದರು.

ಜಾತಿ ಪದ್ಧತಿ, ಆರ್ಥಿಕ ಅಸಮಾನತೆ, ಭಾಷಾ ವೈವಿಧ್ಯತೆ, ವಿಭಿನ್ನ ಸಂಸ್ಕೃತಿ, ಆಚಾರ-ವಿಚಾರಗಳು, ಗಡಿ ಸಮಸ್ಯೆ, ಭಾರತೀಯ ಒಕ್ಕೂಟ ವ್ಯವಸ್ಥೆಯಲ್ಲಿನ ಕಠಿಣ ಸವಾಲುಗಳಾಗಿದ್ದವು. ಇಂತಹ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಭಾರತದ ಸಂವಿಧಾನ ಯಶಸ್ವಿಯಾಗಿದೆ ಎಂದು ಅವರು ತಿಳಿಸಿದರು.ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರನ್ನು ಸ್ಮರಿಸಿದ ಸಚಿವ ಡಾ. ಜಿ. ಪರಮೇಶ್ವರ್ ಅವರು, ಸಂವಿಧಾನ ರಚನಕಾರರಲ್ಲಿ ಒಬ್ಬರಾದ ಕರ್ನಾಟಕದ ಬೆನಗಲ್ ನರಸಿಂಗರಾವ್ ಅವರು ಸಹ ಉತ್ತಮ ಅಂಶಗಳನ್ನು ನಮ್ಮ ಸಂವಿಧಾನಕ್ಕೆ ಸೇರಿಸಿದ್ದಾರೆ. ಹಾಗಾಗಿ ನಮ್ಮ ಸಂವಿಧಾನವು ಅತ್ಯಂತ ವಿಭಿನ್ನವಾದುದು. ಪ್ರಪಂಚದ ಹಲವಾರು ಸಂವಿಧಾನಗಳನ್ನು ಅಧ್ಯಯನ ಮಾಡಿ, ಭಾರತೀಯ ಸಮಾಜಕ್ಕೆ ಪೂರಕವಾಗುವ ಉತ್ತಮ ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಜ್ಯೋತಿಗಣೇಶ್ ವಹಿಸಿದ್ದರು. ಗ್ರಾಮಾಂತರ ಭಾ ಶಾಸಕ ಬಿ. ಸುರೇಶ್ ಗೌಡ, ವಿಧಾನ ಪರಿಷತ್‌ಸದಸ್ಯರಾದ ಆರ್. ರಾಜೇಂದ್ರ,ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ಎ.. ಅವರ ಜಿಲ್ಲಾಧಿಕಾರಿ ಡಾ. ಎನ್. ಜಮ್ ಜಮ್, ಮಹಾನಗರ ಪಾಲಿಕೆ ಆಯುಕ್ತ ಶುಭ, ತಹಶೀಲ್ದಾರ್ ರಾಜೇಶ್ವರಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ, ಮಹಿಳಾ ಪೊಲೀಸ್ ತಂಡ, ಪೊಲೀಸ್ ಬ್ಯಾಂಡ್ ತಂಡ, ಗೃಹ ರಕ್ಷದ ದಳ. ಅರಣ್ಯ ಇಲಾಖೆ ತಂಡ, ಕಲ್ಪತರು ಪಡೆ, ಪೌರ ಕಾರ್ಮಿಕರ ತಂಡ,

ವಿಕಲಚೇತನರ ತಂಡ, ವಿವಿಧ ಶಾಲಾ ಮಕ್ಕಳ ಭಾರತ ಸ್ಕೌಟ್ ಮತ್ತು ಗೈಡ್ ತಂಡಗಳು ಆಕರ್ಷಕ ಪಥ ಸಂಚಲನ ನಡೆಯಿತು.



# ಪ್ರತಿಯೊಬ್ಬರಿಗೂ ಸಮಾನ ಹಕ್ಕು-ಕರ್ತವ್ಯ- ನೀಡಿದ ಸಂವಿಧಾನ ನಮ್ಮದು: ರಾಮಲಿಂಗಾರೆಡ್ಡಿ

ರಾಮನಗರ, : ಜಿಲ್ಲಾಡಳಿತದ ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜ. 26ರ ಸೋಮವಾರ ಆಯೋಜಿಸಲಾಗಿದ್ದ 77ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಸಾರಿಗೆ, ಮುಜರಾಯಿ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿ, ಸಂದೇಶ ನೀಡಿದರು.

ಅವರು ನೀಡಿದ ಸಂದೇಶದ ಸಾರ ಇಂತಿದೆ:

ಜಿಲ್ಲೆಯ ಸಮಸ್ತ ನಾಗರಿಕರೇ, ಚುನಾಯಿತ ಜನ ಪ್ರತಿನಿಧಿಗಳೇ, ಅಧಿಕಾರಿ-ಸಿಬ್ಬಂದಿ ವರ್ಗದವರೇ, ಪ್ರೀತಿಯ ವಿದ್ಯಾರ್ಥಿಗಳೇ ಹಾಗೂ ಮಾಧ್ಯಮದ ಮಿತ್ರರೇ, ತಮಗೆಲ್ಲರಿಗೂ “77ನೇ ಗಣರಾಜ್ಯೋತ್ಸವ ದಿನಾಚರಣೆ”ಯ ಹಾರ್ದಿಕ ಶುಭಾಶಯಗಳು.

ಭಾರತ ಬಗೆಬಗೆಯ ಭೌಗೋಳಿಕ ಪ್ರದೇಶಗಳ ತಾಣ, ಸರ್ವ ಧರ್ಮಗಳ ಸಂಗಮ, ವಿವಿಧ ಭಾಷೆಗಳ ತವರು, ವೈವಿಧ್ಯತೆಗೆ ಹೆಸರಾದ ಈ ನಾಡಿನಲ್ಲಿ ಅದರ ವಿಭಿನ್ನತೆಗಳೊಂದಿಗೆ ದೇಶದ ಏಕತೆ ಹಾಗೂ ಸಮಗ್ರತೆಗೆ ಹೆಸರಾಗಿದೆ.

ಉಳಿಗಮಾನ್ಯ ಪದ್ಧತಿಯನ್ನು ಧಿಕ್ಕರಿಸಿ “ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು” ನೀತಿಯಡಿ ಆರೋಗ್ಯ, ಶಿಕ್ಷಣದ ಜೊತೆಗೆ ಸಮಾನ ಹಕ್ಕನ್ನು ಹಾಗೂ ಪ್ರತಿಯೊಬ್ಬರ ಕರ್ತವ್ಯವನ್ನು ರೂಪಿಸಿದೆ ನಮ್ಮ ಸಂವಿಧಾನ.

ಆಗಸ್ಟ್ 15 ಮತ್ತು ಜನವರಿ 26 ನಮ್ಮ ದೇಶಕ್ಕೆ ಐತಿಹಾಸಿಕ ದಿನಗಳಾಗಿವೆ. 1947ರ ಆಗಸ್ಟ್ 15ರಂದು ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದರೆ, 1950ರ ಜನವರಿ 26ರಂದು ಸಂವಿಧಾನ ಜಾರಿಗೊಂಡು ಭಾರತವು ಗಣರಾಜ್ಯವಾದ ಸುದಿನವಾಗಿದೆ.

ಭಾರತ ದೇಶವು ಸ್ವತಂತ್ರಗೊಂಡ ನಂತರ ಸರ್ಕಾರ, ಆಡಳಿತ ಮತ್ತು ಜನಜೀವನಕ್ಕೆ ಮಾರ್ಗದರ್ಶನ ನೀಡುವ ದಿಸೆಯಲ್ಲಿ



ಸಂವಿಧಾನವೊಂದರ ಅಗತ್ಯವಿದೆ ಎಂಬುದು ಭಾರತ ಸ್ವಾತಂತ್ರ್ಯ ಪಡೆಯುವ ಹಾದಿಯಲ್ಲಿದ್ದಾಗ ರಾಷ್ಟ್ರ ನಾಯಕರಿಗೆ ಮನವರಿಕೆಯಾಯಿತು. ಅದಕ್ಕಾಗಿ 1946ರಲ್ಲಿ ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸಲಾಯಿತು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಯೇ ಪ್ರಭು, ಆತನ ಏಳ್ಗೆಯೇ ಸರ್ಕಾರದ ಆದ್ಯ ಕರ್ತವ್ಯ. ಇಂತಹ ವ್ಯವಸ್ಥೆಯಲ್ಲಿ 76 ವರ್ಷಗಳ ಸುಧೀರ್ಘ ಕಾಲ ಸಾಗಿ ಬಂದಿರುವ ನಾವು, ನಮ್ಮ ದೇಶದ ಪ್ರಗತಿಗೆ ಈ ಪ್ರಜಾಪ್ರಭುತ್ವ ವ್ಯವಸ್ಥೆ ನೀಡಿದ ಕಾಣಿಕೆಯನ್ನು ಮರೆಯಲಾಗದು. ಚುನಾಯಿತ ಪ್ರತಿನಿಧಿ ರಾಷ್ಟ್ರದ ಮುಖ್ಯಸ್ಥನಾಗಿದ್ದರೆ ಅಂತಹ ವ್ಯವಸ್ಥೆಯನ್ನು ಗಣರಾಜ್ಯ ಎನ್ನುತ್ತೇವೆ.

ಭಾರತದ ಸಂವಿಧಾನವು ಸಾಮಾಜಿಕ ನ್ಯಾಯದ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆ ಮತ್ತು ಸುಭದ್ರತೆಯನ್ನು ಸಾಧಿಸಲು ಮಹತ್ವ ನೀಡಿದೆ. ವೈವಿಧ್ಯತೆಯಲ್ಲಿ ಏಕತೆ (ಗಿಓಖಖಿಙ ಖಿಓ ಆಖಗಿಇಖಖಖಖಿಙ) ಸಾಧಿಸಿರುವ ದೇಶ ನಮ್ಮದು ನಮ್ಮ ಸರ್ಕಾರ ಸಂವಿಧಾನಕ್ಕೆ ಬದ್ಧವಾದ ಪ್ರತಿಯೊಬ್ಬರ ಮೂಲಭೂತ ಹಕ್ಕನ್ನು ಕಾಪಾಡುವಲ್ಲಿ ಕಟಿಬದ್ಧವಾಗಿದೆ.

ಸಂವಿಧಾನದ ಪೀಠಿಕೆಯಲ್ಲಿ ತಿಳಿಸಿರುವಂತೆ ಸಮಾನತೆ, ಸಾಮಾಜಿಕ ನ್ಯಾಯ, ಭ್ರಾತೃತ್ವ ಭಾವನೆ, ಸಹಬಾಳ್ವೆಯೊಂದಿಗೆ ಮುನ್ನಡೆಯೋಣ. ಇದು ಸರ್ವಜನಾಂಗದ ಶಾಂತಿಯ ತೋಟ. ಎಲ್ಲರೂ ಪರಸ್ಪರ ಪ್ರೀತಿ, ಸಹಬಾಳ್ವೆ, ಕೋಮು ಸೌಹಾರ್ದತೆ ಕಾಪಾಡುವುದರ ಜೊತೆಗೆ, ನವ ಭಾರತ ನಿರ್ಮಿಸೋಣ ಹಾಗೂ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮೀ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳು ಸಮರ್ಪಕ ಅನುಷ್ಠಾನಗೊಂಡಿದ್ದು, ಕರ್ನಾಟಕ ರಾಜ್ಯ ದೇಶಕ್ಕೆ ಮಾದರಿಯಾಗಿದೆ.

ರಾಜ್ಯಹೈಕೋರ್ಟ್ನನಿವೃತ್ತನ್ಯಾಯಮೂರ್ತಿಗಳಾದ ಎಚ್.ಎನ್. ನಾಗಮೋಹನದಾಸ್ ಅವರು ವಿದ್ಯಾರ್ಥಿ ಮತ್ತು ಯುವ ಜನರಿಗಾಗಿ ಕನ್ನಡ ಭಾಷೆಯಲ್ಲಿ ರಚಿಸಿರುವ ‘ಸಂವಿಧಾನ ಓದು’ ಪುಸ್ತಕದಲ್ಲಿ ಹೇಳುತ್ತಾರೆ.

“ನಾವೆಲ್ಲರೂ ನಮ್ಮ ಸಂವಿಧಾನವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿ ಅದರಂತೆ ನಡೆದುಕೊಂಡರೆ ಕೆಲವೇ ದಿನಗಳಲ್ಲಿ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಹಾಗೂ ಸವಾಲುಗಳನ್ನು ಹಿಮ್ಮೆಟ್ಟಿಸಬಹುದು.”

ಜಿಲ್ಲೆಯ ವಿದ್ಯಾರ್ಥಿಗಳು ಮತ್ತು ವಿದ್ಯಾವಂತ ನಾಗರೀಕರು ಸಂವಿಧಾನ ಓದು ಪುಸ್ತಕವನ್ನು ಓದಿ ಸಂವಿಧಾನದ ಮಹತ್ವವನ್ನು ಅರ್ಥೈಸಿಕೊಳ್ಳುವಂತೆ ಈ ಮೂಲಕ ಕರೆ ನೀಡುತ್ತಾ ನನ್ನ ಮಾತಿಗೆ ವಿರಾಮ ನೀಡುತ್ತೇನೆ. ಮತ್ತೊಮ್ಮೆ ಎಲ್ಲರಿಗೂ ಗಣರಾಜ್ಯೋತ್ಸವದ ಶುಭಾಶಯಗಳು ಎಂದರು.

ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಹಾಗೂ ವಿವಿಧ ಶಾಲೆ ವಿದ್ಯಾರ್ಥಿಗಳಿಂದ ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಪಥಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನ ವಿತರಿಸಿದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಅಂಗಾಂಗ ದಾನ ಮಾಡಿದ ಕುಟುಂಬದವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ.ಎನ್. ನಟರಾಜು ಗಾಣಕಲ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕೆ. ರಾಜು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷರಾದ ಗಂಗಾಧರ್, ನಗರಸಭೆ ಅಧ್ಯಕ್ಷರಾದ ಕೆ. ಶೇಷಾದ್ರಿ (ಶಶಿ), ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಚೇತನ್ ಕುಮಾರ್ ಎ.ಬಿ., ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಉಪವಿಭಾಗಾಧಿಕಾರಿ ಬಿನೋಯ್ ಸೇರಿದಂತೆ ಅಧಿಕಾರಿಗಳು ಹಾಗೂ ಗಣ್ಯರು ವೇದಿಕೆಯಲ್ಲಿದ್ದರು.

ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೂರೆಗೊಂಡವು

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಪಿಡುಗು ಎನಿಸಿರುವ ಭಯೋತ್ಪಾದನೆ ಕಿತ್ತೊಗೆಯಬೇಕು : ಶಾಸಕ.ಶ್ರೀನಿವಾಸ್



ಗುಬ್ಬಿ: ಆಧುನಿಕತೆ ಬೆಳೆದಂತೆ ವಿಶ್ವದಲ್ಲಿ ದೊಡ್ಡ ಪಿಡುಗು ಎನಿಸಿದ ಭಯೋತ್ಪಾದನೆ ಬೇರು ಸಹಿತ ಕೀಳಬೇಕಿದೆ. ಈ ಕಾರ್ಯಕ್ಕೆ ಶೈಕ್ಷಣಿಕ ಪ್ರಗತಿ ಸಾಧಿಸಿ ಮುಂದಿನ ಪೀಳಿಗೆಯನ್ನು ಉತ್ತಮ ನಾಗರಿಕರನ್ನಾಗಿ ಮಾರ್ಪಾಡು ಮಾಡಬೇಕಿದೆ. ಶಿಕ್ಷಣ ಇಲಾಖೆ ಈ ಸತ್ಕಾರ್ಯ ಮಾಡಬೇಕಿದೆ ಎಂದು ಶಾಸಕ ಎಸ್.ಆರ್.ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ತಾಲ್ಲೂಕು ಆಡಳಿತ ಆಯೋಜಿಸಿದ್ದ 77 ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದೇಶದ ಅಭಿವೃದ್ಧಿ ಜೊತೆಗೆ ಸಮಾಜಘಾತುಕ ಕೆಲಸಗಳು ಹೆಚ್ಚಿವೆ. ಯೋಧರು, ಪೊಲೀಸರು ಹೀಗೆ ರಕ್ಷಣಾ ವ್ಯವಸ್ಥೆ ಹೆಚ್ಚುಮಾಡಿಕೊಳ್ಳುವ ಸ್ಥಿತಿಯಲ್ಲಿದ್ದೇವೆ ಎಂದರು.

ವಿಶ್ವದ ದೊಡ್ಡ ಪ್ರಜಾಪ್ರಭುತ್ವ ದೇಶ ಭಾರತದಲ್ಲಿ ದೇಶಭಕ್ತಿ ಕೊರತೆ ಹೆಚ್ಚಾಗುವ ಮುನ್ನ ಶಿಕ್ಷಣ ರಂಗ ಎಚ್ಚೆತ್ತು ಮಕ್ಕಳಲ್ಲಿ ದೇಶಾಭಿಮಾನ ಬಿತ್ತ ಬೇಕಿದೆ. ಬಲಿಷ್ಠ ರಾಷ್ಟ್ರ ಕಟ್ಟಲು ಎಲ್ಲಾ ರಂಗದ ಜೊತೆ ಶಿಕ್ಷಣ ಕ್ಷೇತ್ರ ಪ್ರಬಲವಾಗಿ ಬೆಳೆಯಬೇಕಿದೆ ಎಂದರು.

ಧ್ವಜಾರೋಹಣ ನೆರವೇರಿಸಿದ ತಹಶೀಲ್ದಾರ್ ಆರತಿ.ಬಿ ಸಂದೇಶ ನೀಡಿ ಸಂವಿಧಾನ ಕೇವಲ ಪುಸ್ತಕವಲ್ಲ. ನಮ್ಮ ಪ್ರಜಾಪ್ರಭುತ್ವದ ಆತ್ಮ ಎನಿಸಿದೆ. ನಮ್ಮ ಸಂವಿಧಾನ ಮೌಲ್ಯವನ್ನು ಎತ್ತಿಹಿಡಿದು ಒಳ್ಳೆಯ ನಾಗರಿಕರಾಗಿ ಏಕತೆ ಐಕ್ಯತೆ ಸಾರುವ ಜೊತೆಗೆ ದೇಶಕ್ಕಾಗಿ ನಡೆದ ತ್ಯಾಗ ಬಲಿದಾನ ಸ್ಮರಿಸಿ ದೇಶ ಕಟ್ಟೋಣ ಎಂದರು.

ಸಿಐಟಿ ಕಾಲೇಜು ಪ್ರೊ.ಪ್ರದೀಪ್ ಮಾತನಾಡಿ ಜನರ ಮನಸ್ಸಿನಲ್ಲಿ ಉಳಿದು ಮನುಷ್ಯನ ಬದುಕಿನ ಕಲೆಯ ಭೌತಿಕ ರೂಪವಾಗಿ ಸಂವಿಧಾನ ಸ್ಮರಿಸಬೇಕಿದೆ. ಕರ್ತವ್ಯದ ಮಾರ್ಗಸೂಚಿ ಮಾಡಿಕೊಂಡು ಮೌಲ್ಯವನ್ನು ಉಳಿಸಿ ಬೆಳೆಸೋಣ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಪೊಲೀಸ್, ಗೃಹರಕ್ಷಕ ದಳ, ಎನ್ ಸಿಸಿ, ಸ್ಕೌಟ್ ಅಂಡ್ ಗೈಡ್ಸ್ ಹಾಗೂ ಶಾಲಾ ಮಕ್ಕಳಿಂದ ಪಥ ಸಂಚಲನ ನಡೆಯಿತು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಹಾಗೂ ಕ್ರೀಡಾಪಟುಗಳು ಮತ್ತು ವಿಕಲಚೇತನ ಕ್ರೀಡಾಪಟುಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

# ರಾಷ್ಟ್ರೀಯ ಹಬ್ಬಗಳು ಅಧಿಕಾರಿ ವರ್ಗ,ಶಾಲಾ ಮಕ್ಕಳಿಗೆ ಸೀಮಿತವಾಗಿರುವುದು ದುರದೃಷ್ಟಕರ:ಟಿಬಿಜೆ

ಶಿರಾ: ರಾಷ್ಟ್ರೀಯ ಹಬ್ಬಗಳು ಕೇವಲ ಅಧಿಕಾರಿ ವರ್ಗ ಅಥವಾ ಶಾಲಾ ಮಕ್ಕಳಿಗೆ ಸೀಮಿತವಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ. ಯಾವುದೇ ಆಚರಣೆಯ ಹಿನ್ನೆಲೆ, ಮಹತ್ವ, ಅದರಿಂದ ಕಲಿಯಬೇಕಾದ ಸಂದೇಶ ಇವುಗಳು ಸಾರ್ವಜನಿಕರ ಅರಿವಿಗೆ ಬಾರದೇ ಹೋದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಪೂರ್ಣವಾಗುವುದಿಲ್ಲ ಎಂದು ಶಾಸಕ ಟಿ.ಬಿ. ಜಯಚಂದ್ರ ಅಭಿಪ್ರಾಯಪಟ್ಟರು.

ಇಲ್ಲಿನ ಸ್ವಾಮಿ ವಿವೇಕಾನಂದ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಭಾರತ ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಂವಿಧಾನ ಎಂದಾಕ್ಷಣ ನಾವು ಅದರಲ್ಲಿ ಉಲ್ಲೇಖಿಸಿರುವ ಹಕ್ಕುಗಳ ಬಗ್ಗೆ ಮಾತ್ರ ಮಾತನಾಡುತ್ತೇವೆ. ಆದರೆ ಕರ್ತವ್ಯಗಳ ಬಗ್ಗೆ ಮಾತನಾಡುವುದಿಲ್ಲ. ಸಂವಿಧಾನಿಕ ಸ್ಥಾನಮಾನಗಳು ಮಾಲಿಕತ್ವವಲ್ಲ. ಜನರ ಸೇವೆಗೆ ಮೀಸಲು ಎನ್ನುವ ಅರಿವಿರಬೇಕು ಎಂದು ಅಭಿಪ್ರಾಯ ಪಟ್ಟರು.

ಇದಕ್ಕೂ ಮುನ್ನ ಮಾತನಾಡಿದ ವಿಧಾನಪರಿಷತ್ ಶಾಸಕ ಎಂ. ಚಿದಾನಂದ ಗೌಡ, ಸಂವಿಧಾನ ರೂಪಿಸಿದ ನಮ್ಮ ಹಿರಿಯರ ಕನಸಿನಂತೆ ನಾವು ನಡೆದುಕೊಳ್ಳುತ್ತಿದ್ದೇವಾ ಎನ್ನುವ ಆತ್ಮ ವಿಮರ್ಶೆ ಮಾಡಿಕೊಳ್ಳುವ ಅವಶ್ಯಕತೆ ಇದೆ. ಸಮಾನತೆ ಕೇವಲ ಓಟು ಚಲಾಯಿಸುವ ಸಂಖ್ಯೆಯಲ್ಲಿ ಮಾತ್ರ ಇದೆ. ಉಳಿದಂತೆ ಸಂವಿಧಾನದ ಆಶಯಗಳಾದ ಧಾರ್ಮಿಕ ಸ್ವಾತಂತ್ರ್ಯ, ಶಿಕ್ಷಣದ ಹಕ್ಕು, ವಾಕ್ ಸ್ವಾತಂತ್ರ್ಯಗಳು ಸಮಾನವಾಗಿ ಉಳಿದಿಲ್ಲ. ಅಧಿಕಾರವಂತೂ ವಂಶಪಾರಂಪರ್ಯವಾಗಿ ನಡೆಸುತ್ತಿರುವ ವ್ಯವಸ್ಥೆ ಇದೆ. ಸರ್ಕಾರಗಳು ಎಂದರೆ ಬರಿ ಆಯವ್ಯಯ ರೂಪಿಸುವುದಕ್ಕಷ್ಟೆ ಸೀಮಿತವಾಗಿವೆ. ಜನರ ರೀತಿ-ನೀತಿ, ನಡವಳಿಕೆ ಇವುಗಳ ಬಗ್ಗೆಯೂ ಸರ್ಕಾರಗಳು ಗಮನ ನೀಡಬೇಕು.

ಉಚಿತ ಶಿಕ್ಷಣ, ಪುಸ್ತಕ, ಯೂನಿಫಾರಂ, ಬಿಸಿಯೂಟ ಎಂದಾದ ನಂತರವೂ ಶಿಕ್ಷಣದಲ್ಲಿ ವಹಿಸಬೇಕಾದ ಕಾಳಜಿ ಕೊರತೆಯಿಂದ ಜನರು ಖಾಸಗಿ ಶಾಲೆಗಳತ್ತ ವಾಲುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಗಳ ಜವಾಬ್ದಾರಿ ಹೆಚ್ಚಿದೆ. ಬಡ ಮಕ್ಕಳಿಗಾಗಿ ಶ್ರೀಮಂತ ಶಾಲೆಗಳ ನಿರ್ಮಾಣ ಅಗತ್ಯವಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಧ್ವಜಾರೋಹಣೆ ನೆರವೇರಿಸಿದ ತಹಸೀಲ್ದಾರ್ ಆನಂದ ಕುಮಾರ್, ಗಣರಾಜ್ಯೋತ್ಸವದ ಸಂದೇಶ ನೀಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರವನ್ನು ಕಾರ್ಯಕ್ರಮದ್ದಲ್ಲಿ ಗೌರವಿಸಲಾಯಿತು. ನಗರಸಭೆ ಅಧ್ಯಕ್ಷ ಜೀಶಾನ್ ಮಹಮೂದ್, ಉಪಾಧ್ಯಕ್ಷ ಲಕ್ಷ್ಮೀಕಾಂತ್, ಅಜಯಕುಮಾರ್, ಸೂಡ ಅಧ್ಯಕ್ಷ ಪಿ.ಆರ್. ಮಂಜುನಾಥ್,

ಬಿಇಓ ಕೃಷ್ಣಪ್ಪ, ಪೌರಾಯುಕ್ತ ರುದ್ರೇಶ್, ಅರಣ್ಯಾಧಿಕಾರಿ ನವನೀತ್, ಆಶ್ರಯ ಸಮಿತಿ ಸದಸ್ಯರು, ಸೂಡ ಸದಸ್ಯರು ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಗಡಿಕಾಯುತ್ತಿರುವ ವೀರಯೋಧರಿಂದಲೇ ನಾವು ದೇಶದಲ್ಲಿ ಸುರಕ್ಷಿತವಾಗಿರುವುದು



ಚಿಕ್ಕನಾಯಕನಹಳ್ಳಿ : ಸಂವಿಧಾನದ ಅಡಿಯಲ್ಲಿ ಪೌರ ಕಾರ್ಮಿಕರು ಮಾರ್ಪಾಸ್ಟ್ ನಲ್ಲಿ ಪಾಲ್ಗೊಂಡಿದ್ದಾರೆ, ಇದರಿಂದ ಬಹಳ ಸಂತಸವಾಗಿದೆ. ಎಲ್ಲರಿಗೂ ಸ್ವಾತಂತ್ರ್ಯವಿದೆ ಎಂದು ಸಾಬೀತಾಗಿದೆ ಎಂದು ಶಾಸಕ ಸಿ.ಬಿ.ಸುರೇಶ್ ಬಾಬು ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ 77ನೇ ಗಣರಾಜ್ಯೋತ್ಸವ ದಿನಾಚಾರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಗಡಿಕಾಯುತ್ತಿರುವ ವೀರಯೋಧರಿಂದಲೇ ನಾವು ದೇಶದಲ್ಲಿ ಸುರಕ್ಷಿತವಾಗಿ ಬಾಳುತ್ತಿರುವುದು, ಗಣತಂತ್ರ ವ್ಯವಸ್ಥೆ ಬಂದು 77 ವರ್ಷಗಳಾಗಿದೆ. ವಿಶ್ವದಲ್ಲಿ ಹೆಚ್ಚಿನ ಜನಸಂಖ್ಯೆ ಇರುವುದು ಭಾರತ ದೇಶದಲ್ಲಿ. ಹಲವಾರು ದೇಶಗಳಲ್ಲಿ ಪ್ರಜಾಪ್ರಭುತ್ವ ಇಲ್ಲ. ಈಗಲೂ ಸ್ವಾತಂತ್ರ್ಯ ದೊರಕದೆ ಅಲ್ಲಿ ಅಧ್ಯಕ್ಷೀಯ ಸ್ಥಾನವಿದೆ.

ವಂದೇ ಮಾತರಂ ಎಲ್ಲರೂ ಹೇಳುವಂತಹ ಪರಿಪಾಠ ಮಾಡಿಕೊಂಡಿದ್ದೇವೆ, ಸಂವಿಧಾನ ರಚನೆ ಮಾಡಲು ಬಾಬಾ ಸಾಹೇಬ್ ಅಂಬೇಡ್ಕರ್ ರವರು ಶ್ರಮಿಸಿದ್ದಾರೆ. ಅವರು ಮುಕ್ತವಾದ ಅವಕಾಶವನ್ನು ನೀಡಿದ್ದಾರೆ. ಇಂದು ರಾಜ್ಯ ಸರ್ಕಾರ ಮಕ್ಕಳಿಗೆ ಎಸ್.ಎಸ್.ಎಲ್.ಸಿಯಲ್ಲಿ ಹೆಚ್ಚಿನ ಅಂಕ ಪಡೆದ ಮಕ್ಕಳಿಗೆ 50 ಸಾವಿರ ನೀಡುತ್ತಿದೆ. ಪ್ರತಿ ತಾಲ್ಲೂಕಿಗೆ 3 ಮಕ್ಕಳಿಗೆ ಹಣ ನೀಡುತ್ತಿದ್ದು, ಜಿಲ್ಲೆಯಲ್ಲೇ ಹೆಚ್ಚು ಅಂಕ ಪಡೆದಿದ್ದರಿಂದ ಜಿಲ್ಲೆಯಿಂದಲೂ ಸೌಲಭ್ಯ ದೊರೆಯುತ್ತಿದೆ. ತಾಲ್ಲೂಕಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಅಂಕ ಬರಲು ಸಹಕರಿಸುತ್ತಿರುವ ಬಿಇಓ ರವರ ಜೊತೆ ಇರುವ ಎಲ್ಲಾ ಶಿಕ್ಷಕರಿಗೂ ಅಭಿನಂದನೆ ಸಲ್ಲಿಸುತ್ತಿದ್ದೇನೆ ಎಂದರಲ್ಲದೆ, ಶೈಕ್ಷಣಿಕವಾಗಿ ಒಂದು ಹೆಜ್ಜೆ ಮುಂದೆ ಇಡುತ್ತಿದ್ದೇವೆ. ಶಿಕ್ಷಣದಲ್ಲಿ ಸರ್ಕಾರಿ, ಸರ್ಕಾರಿ ಅನುದಾನ ರಹಿತ, ಶಿಕ್ಷಕರನ್ನು ಒಟ್ಟು ಗೂಡಿಸಿಕೊಂಡು ಕರೆದೊಯ್ಯಲು ಮುಂದಾಗಿದ್ದೇವೆ. ಉತ್ತಮ ರೀತಿಯಲ್ಲಿ ಮಕ್ಕಳನ್ನು ತಯಾರು ಮಾಡಲು ಶಿಕ್ಷಣ ಇಲಾಖೆ ಮುಂದಾಗಿರುವುದು ಸಂತಸದ ವಿಷಯ, ಪಿಯುಸಿ ವರೆಗೆ ನಾವು ಮಕ್ಕಳನ್ನು ದಡ ಸೇರಿಸಿದರೆ ಮಕ್ಕಳು ಅವರ ಮುಂದಿನ ಜೀವನ ಮಕ್ಕಳು ಕಟ್ಟಿಕೊಳ್ಳಲು ಮುಂದಾಗುತ್ತಾರೆ ಎಂದರು.

ತಹಶೀಲ್ದಾರ್ ಮಮತ ಮಾತನಾಡಿ, ಭಾರತದ ಜನತೆಯಾದ ನಾವು ಭಾರತವನ್ನು ಸಾರ್ವಭೌಮ ಸಮಾಜವಾದಿ, ಧರ್ಮ, ನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ ಭಾರತದ ಎಲ್ಲಾ ನಾಗರೀಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ದೆ ಮತ್ತು ಉಪಾಸನೆಯ ಸ್ವಾತಂತ್ರ್ಯವನ್ನು, ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು ದೊರೆಯುವಂತೆ ಮಾಡುವುದಕ್ಕಾಗಿ ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಾನತೆಗಾಗಿ ಎಲ್ಲರಲ್ಲಿ ಸಹೋದರತ್ವ ಭಾವನೆಯನ್ನು ಮೂಡಿಸುವುದಕ್ಕೆ ದೃಢ ಸಂಕಲ್ಪ ಮಾಡಿ ನಮ್ಮ ಸಂವಿಧಾನ ಸಭೆಯಲ್ಲಿ 1949 ನೇ ಇಸವಿಯ ನವಂಬರ್ ತಿಂಗಳ 26ನೇ ದಿನದಂದು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು ಅಂಗೀಕರಿಸಿ ಶಾಸನವಾಗಿ ವಿಧಿಸಿಕೊಂಡಿದ್ದೇವೆ ಎಂದರು.

# ಹನುಮ ರಥೋತ್ಸವ



ತಿಪಟೂರು :ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಕಂಬದಹಳ್ಳಿ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿಯವರಿಗೆ ರಥಸಪ್ತಮಿಯ ಅಂಗವಾಗಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ರಥೋತ್ಸವದಲ್ಲಿ ಗ್ರಾಮದೇವತೆ ಮಣಿಕಿಕೆರೆ ಶ್ರೀಕರಿಯಮ್ಮ ದೇವಿ, ಶ್ರೀ ದೂತರಾಯ ಸ್ವಾಮಿ, ಶ್ರೀ ಕೆಂಚರಾಯ ಸ್ವಾಮಿ, ಹಾಲೇನಹಳ್ಳಿ ಶ್ರೀಕರಿಯಮ್ಮದೇವಿ, ಶ್ರೀದೂತರಾಯ ಸ್ವಾಮಿ ಸಮ್ಮುಖದಲ್ಲಿ ಸಹಸ್ರಾರು ಜನ ಭಕ್ತಾದಿಗಳು ಸ್ವಾಮಿಯವರಿಗೆ ಅಭಿಷೇಕ, ಪೂಜೆ, ಮಂಗಳಾರತಿ, ತಂಬಿಟ್ಟಿನ ಆರತಿ ಹಣ್ಣು ಕಾಯಿ ನೇವೇದ್ಯ ಅರ್ಪಿಸಿದರು, ಧನ್ಯತೆ ಮೆರೆರು ದೇವರುಗಳ ಉಯ್ಯಾಲೋತ್ಸವವನ್ನು ಕಣ್ತುಂಬಿಕೊಂಡರು.

## ಅಪರಿಚಿತ ವಾಹನ ಡಿಕ್ಕಿ ಯುವಕ ಸಾವು

ತಿಪಟೂರು: ದ್ವಿಚಕ್ರವಾಹನಕ್ಕೆ ಅಪರಿಚಿತ ವಾಹನ ಡಿಕ್ಕಿಯಾಗಿ ಯುವಕ ಸ್ಥಳದಲ್ಲೇ ಮೃತಪಟ್ಟ ಘಟನೆ ತಿಪಟೂರು ತಾಲ್ಲೂಕಿನ ರಾಷ್ಟ್ರೀಯ 206ರ ಮಂಜುನಾಥ ನಗರ ಬೈಪಾಸ್ ಬಳಿ ಜರುಗಿದೆ.

ಮೃತ ವ್ಯಕ್ತಿಯನ್ನು ವಿರುಪಾಕ್ಷಿಪುರದ ಕೃಷ್ಣಪ್ಪ ಎಂಬುವರ ಮಗ ವಿನಯ್ (20ವರ್ಷ) ಎಂದು ಹೇಳಲಾಗುತ್ತಿದ್ದು. ಮೆಕ್ಯಾನಿಕ್ ವೃತ್ತಿಯಿಂದ ಮನೆಗೆ ಆಧಾರಸ್ಥಂಭವಾಗಿದ್ದ ಎಂದು ತಿಳಿದುಬಂದಿದೆ. ಮೃತ ವ್ಯಕ್ತಿಯು ಬೈಪಾಸ್ ರಸ್ತೆಯಲ್ಲಿ ಸಂಚರಿಸುತ್ತಿರುವಾಗ ಹಿಂಬದಿಯಿಂದ ಬಂದ ವಾಹನ ಒಂದು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಸಾವನಪ್ಪಿದ್ದಾನೆ. ಹಿಂಬದಿಯಿಂದ ಡಿಕ್ಕಿ ಹೊಡೆದ ವಾಹನವು ಯಾವುದೆಂಬುದು ಪೋಲೀಸ್ ತನಿಖೆಯಿಂದ ತಿಳಿಯಬೇಕಾಗಿದೆ. ಪ್ರಕರಣ ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ದಾಖಲಾಗಿದ್ದು ತನಿಖೆ ಚುರುಕುಗೊಂಡಿದೆ.



## ಕಲೇಸಂ ಜಿಲ್ಲಾಧ್ಯಕ್ಷರಾಗಿ ಡಾ.ಆಶಾ ಬಗ್ಗನಡು ಆಯ್ಕೆ



ತುಮಕೂರು: ಕರ್ನಾಟಕ ಲೇಖಕಿಯರ ಸಂಘದ ತುಮಕೂರು ಜಿಲ್ಲಾ ಶಾಖೆಗೆ ನಡೆದ ಚುನಾವಣೆಯಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಲೇಖಕಿ ಡಾ.ಆಶಾರಾಣಿ ಬಗ್ಗನಡು ಆಯ್ಕೆಯಾಗಿದ್ದಾರೆ.

ತುಮಕೂರು ನಗರದ ಕನ್ನಡ ಭವನದಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಜಿಲ್ಲಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದು ಡಾ.ಆಶಾರಾಣಿ ಬಗ್ಗನಡು ಅತ್ಯಧಿಕ ಮತಗಳನ್ನು ಗಳಿಸಿ ಜಯಶೀಲರಾದರು.ಒಟ್ಟು 54 ಮತಗಳಲ್ಲಿ 48 ಮತಗಳನ್ನು ಆಶಾರಾಣಿ ಬಗ್ಗನಡು ಪಡೆದರು. ಸುಶೀಲಾ ಸದಾಶಿವಯ್ಯ, ನಾಗರತ್ನ ಚಂದ್ರಪ್ಪ ಪ್ರತಿಸ್ಪರ್ಧಿಗಳಾಗಿದ್ದರು.ನೂತನ ಅಧ್ಯಕ್ಷೆ ಡಾ.ಆಶಾರಾಣಿ ಬಗ್ಗನಡು ಅವರನ್ನು, ನಿಕಟಪೂರ್ವ ಅಧ್ಯಕ್ಷೆ ಮಲ್ಲಿಕಾ ಬಸವರಾಜು ಮತ್ತು ಸಂಘದ ಸದಸ್ಯರು ಅಭಿನಂದಿಸಿದರು.

# ಇನ್ನೆರಡು ವರ್ಷಗಳಲ್ಲಿ ತಾಲ್ಲೂಕಿಗೆ ಸಮಗ್ರ ನೀರಾವರಿ ಶಾಸಕ ಡಾ.ರಂಗನಾಥ್



ಕುಣಿಗಲ್:ಪಟ್ಟಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅಮ್ಮಿಕೋಳ್ಳಲಾಗಿತ್ತು ಪಟ್ಟಣದ ಸ್ಟಡ್ ಫಾರಂ ನಿಂದ ಶಾಲ ಕಾಲೇಜು ವಿದ್ಯಾರ್ಥಿಗಳು ಪಥ ಸಂಚಲನ ಮೂಲಕ ಕಾರ್ಯಕ್ರಮಕ್ಕೆ ಆಗಮಿಸಿ ಬಳಿಕ ತಹಶೀಲ್ದಾರ್ ಯು.ರಶ್ಮಿ ಧ್ವಜಾರೋಹಣ ನೆರವೇರಿಸಿದರು ಬಳಿಕ ಶಾಸಕ ಡಾ.ರಂಗನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಪ್ಪತ್ತೈದು ಸಾವಿರ ಮಕ್ಕಳಿಗೆ ಕುಣಿಗಲ್ ಉತ್ಸವದಲ್ಲಿ ವೇದಿಕೆ ಕಲ್ಪಿಸುವ ಮೂಲಕ ಅವರ ಕ್ರೀಡಾ ಆಸಕ್ತಿಗೆ ಶಕ್ತಿ ತುಂಬಲಾಗಿದೆ,ಮುಂದಿನ ಆರು ತಿಂಗಳ ಒಳಗಾಗಿ ಕಂದಾಯ ಇಲಾಖೆಯಲ್ಲಿ ಬಾಕಿ ಉಳಿದಿರುವ ಪಹಣಿಗಳ ಪರಿಷ್ಕರಣೆ ಮಾಡಲಾಗುವುದು,ಕುಣಿಗಲ್ ಪಟ್ಟಣದ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಎ ಖಾತೆ ಮತ್ತು ಬಿ ಖಾತೆ ಪಡೆದುಕೊಳ್ಳಲು ಇರುವ ಸಮಸ್ಯೆ ಬಗೆ ಹರಿಸುವ ನಿಟ್ಟಿನಲ್ಲಿ ನಿಯಮ ಸರಳೀಕರಣ ಗಳಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು,ಮುಂದಿನ ವರ್ಷ ಹುತ್ರಿದುರ್ಗ ಹೋಬಳಿಯ ಎಲ್ಲಕೆರೆಗಳಿಗೂ ನೀರು ತುಂಬಿಸಲಾಗುತ್ತದೆ ಪ್ರಾಯೋಗಿಕವಾಗಿ ಎಂಟು ಕೆರೆಗಳನ್ನು ತುಂಬಿಸಲಾಗಿದೆ,65 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ತಾಯಿ ಮಕ್ಕಳ ಆಸ್ಪತ್ರೆಯನ್ನು ಮುಂದಿನ ತಿಂಗಳು ಉದ್ಘಾಟಿಸಲಾಗುವುದು ವೈಜಿ ಗುಡ್ಡ ಜಲಾಶಯದಿಂದ ಹುಲಿಯೂರುದುರ್ಗ ದೀಪಾಂಬುದ್ದಿ ಕೆರೆಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಲಾಗುವುದು ಇಗಾಗಲೆ ಕೊತ್ತಗೆರೆ ಹೊಬಳಿ ವ್ಯಾಪ್ತಿಯ ಕೆರೆಗಳನ್ನು ತುಂಬಿಸಲು 35 ಕೊಟಿ ರೂಪಾಯಿ ವೆಚ್ಚದಲ್ಲಿ ಯೋಜನೆಗೆ ಸಚಿವ ಸಂಪುಟದಲ್ಲಿ ಅನುಮೊದನೆ ನಿಡಲಾಗಿದೆ ಇನ್ನೆರಡು ವರ್ಷಗಳಲ್ಲಿ ತಾಲ್ಲೂಕಿಗೆ ಸಮಗ್ರ ನೀರಾವರಿ ಕಲ್ಪಿಸಲು ಕ್ರಮ ವಹಿಸುವುದಾಗಿ ಶಾಸಕ ಡಾ.ರಂಗನಾಥ್ ತಿಳಿಸಿದರು ಇಪ್ಪತ್ತೈದು ಲಕ್ಷ ರೂಪಾಯಿ ವೆಚ್ಚದಲ್ಲಿ ಮಕ್ಕಳಿಗೆ ಸಿ.ಇ.ಟಿ ಮತ್ತು ನೀಟ್ ಪರಿಕ್ಷೆಗಳಿಗೆ ನುರಿತ ಶಿಕ್ಷಕರಿಂದ ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಕ್ರಮ ವಹಿಸಲಾಗಿದೆ ಎಂದರು, ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಹಲವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಯು.ರಶ್ಮಿ, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣ ಅಧಿಕಾರಿ ವಸಂತ್ ಕುಮಾರ್,ತಾಲ್ಲೂಕು ಆಡಳಿತ ವೈದ್ಯಧಿಕಾರಿ ಡಾ.ಮರಿಯಪ್ಪ,ಸಿಪಿಐ ಮಾಧ್ಯನಾಯಕ್,ಕ್ಷೇತ್ರ ಶಿಕ್ಷಣಾಧಿಕಾರಿ ಬೋರೇಗೌಡ,ಕೃಷಿ ಸಹಾಯಕ ನಿರ್ದೇಶಕ ರಂಗನಾಥ್,ತೋಟಗಾರಿಕೆ ಸಹಾಯಕ ನಿರ್ದೇಶಕ ವಿಜಯ್ ಕುಮಾರ್,ಪುರಸಭೆ ಮುಖ್ಯಾಧಿಕಾರಿ ಕೃಷ್ಣ, ಸಿಡಿಪಿಓ ಕಮಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕಪನಿಪಾಳ್ಯ ರಮೇಶ್, ಸೇರಿದಂತೆ ಹಲವರು ಉಪಸ್ಥಿತರಿದ್ದರು

# ತಾವರೆಕೆರೆ ಬಂಡಿ ಶ್ರೀ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ





ಶಿರಾ : ರೈತರೆಲ್ಲ ಒಗ್ಗೂಡಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ನಮ್ಮ ದೇಶೀಯ ತಳಿರಾಸುಗಳನ್ನು ಖರೀದಿ ಮಾಡಲು ಜಾತ್ರಾ ಮಹೋತ್ಸವ ಸಹಕಾರಿಯಾಗಿದೆ, ಮಳೆಯ ಅಭಾವದಲ್ಲೂ ಹೇಮಾವತಿ ನೀರು ಶಿರಾ ತಾಲೂಕಿಗೆ ಸಮೃದ್ಧಿ ಯಾಗಿ ಹರಿದ ಕಾರಣ ಜಾತ್ರೆಗಳು ಅತ್ಯಂತ ಉತ್ಸಾಹದಿಂದ ಆಗುತ್ತಿವೆ ಎಂದು ದೆಹಲಿ ವಿಶೇಷ ಪ್ರತಿನಿಧಿ, ಶಾಸಕ ಟಿ.ಬಿ. ಜಯಚಂದ್ರ ಹೇಳಿದರು.

ಶಿರಾ ತಾಲೂಕಿನ ತಾವರೆಕೆರೆ ಬಂಡಿ ಶ್ರೀ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ ಹಾಗೂ ದನಗಳ ಜಾತ್ರೆ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು. ರಾಜ್ಯದಲ್ಲಿಯೇ ಪ್ರಸಿದ್ಧಿ ಪಡೆದಿರುವ ತಾವರೆಕೆರೆ ಬಂಡಿ ಶ್ರೀ ರಂಗನಾಥ ಸ್ವಾಮಿ ದನಗಳ ಜಾತ್ರೆ ಯಲ್ಲಿ ನಮ್ಮ ನಾಡಿನ ಪರಂಪರೆಯ ಉತ್ತಮ ತಳಿಯ ರಾಸುಗಳು ರೈತರಿಗೆ ಸಿಗುತ್ತಿದ್ದು, ಖರೀದಿದರ ಸಂಖ್ಯೆ ಹೆಚ್ಚಾಗಿದೆ. ಯಂತ್ರ ಆಧಾರಿತ ಕೃಷಿ ಹೆಚ್ಚಾಗುತ್ತಿದ್ದು, ಈ ಸಂದರ್ಭದಲ್ಲಿ ರಾಸು ಗಳನ್ನು ಎಷ್ಟೇ ದುಬಾರಿಯಾದರು ಖರೀದಿ ಮಾಡಲು ರೈತರು ಮುಂದಾಗುತ್ತಿರುವುದು ಮೆಚ್ಚುವಂಥದ್ದು. ಬಂಡಿ ಶ್ರೀರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ ಹೇಗೆ ಸರಾಗವಾಗಿ ಹರಿಯುತೋ ಅದೇ ರೀತಿ ರೈತ ಮತ್ತು ನಾಡಿನ ಜನಸಾಮಾನ್ಯರ ಕಷ್ಟಗಳು ದೂರವಾಗಿ ನಾಡು ಸುಭಿಕ್ಷ ವಾಗಿರಲಿ ಎಂದು ಬಂಡಿ ಶ್ರೀರಂಗನಾಥ ಸ್ವಾಮಿಯಲ್ಲಿ ಪ್ರಾರ್ಥಿಸುವುದಾಗಿ ಹೇಳಿದರು. ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ರೈತರಿಗೆ ಎಪಿಎಂಸಿ ಮಾಜಿ ಅಧ್ಯಕ್ಷ ಶಶಿಧರ ಗೌಡ ಮತ್ತು ಸ್ನೇಹಿತರು ಮಧ್ಯಾಹ್ನದ ಊಟ ನೀಡುತ್ತಿರುವ ಸೇವೆ ಮೆಚ್ಚುವಂಥದ್ದು ಎಂದರು.

ವಿಧಾನ ಪರಿಷತ್ ಸದಸ್ಯ ಚಿದಾನಂದ ಎಂ ಗೌಡ ಮಾತನಾಡಿ ವಿಜ್ಞಾನ ಎಷ್ಟೇ ಬೆಳೆದರೂ ಕೃತಕವಾಗಿ ಅಕ್ಕಿ, ರಾಗಿ ಬೆಳೆಯಲು ಸಾಧ್ಯವಿಲ್ಲ , ದೇಶಿಯ ತಳಿಗಳನ್ನು ಸಾಕಾಣಿಕೆ ಮಾಡುವ ಮೂಲಕ ಸಾವಯುವ ಗೊಬ್ಬರ ಬಳಸಿ ಕೃಷಿ ಮಾಡುವಂತಹ ಪದ್ಧತಿ ಮತ್ತೆ ಮರುಕಳಿಸಿದಾಗ ಜನರ ಆರೋಗ್ಯ ಸ್ಥಿರ ವಾಗಿರಲು ಸಾಧ್ಯ. ಜಾತ್ರೆಯಲ್ಲಿ ರಾಸುಗಳಿಗೆ ಶೃಂಗಾರ ಮಾಡಿ ತನ್ನ ಮಕ್ಕಳಂತೆ ಪೋಷಣೆ ಮಾಡಿ ಉತ್ಸವದಲ್ಲಿ ವಿಶೇಷ ರೀತಿಯಲ್ಲಿ ಪಾಲ್ಗೊಳ್ಳುವ ರಾಸುಗಳ ಮೆರವಣಿಗೆ ಪದ್ಧತಿ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯ ಶ್ರೀಮಂತಿಕೆಯನ್ನು ಸಾಕ್ಷಿಕರಿಸುತ್ತದೆ ಎಂದರು. ಪ್ರತಿಯೊಬ್ಬ ರೈತ ಹಳ್ಳಿಕಾರ್ ತಳಿರಾಸುಗಳನ್ನು ಸಾಕುವಂತಹ ಸಂಪ್ರದಾಯ ಬೆಳೆಸಿಕೊಂಡು ದೇಶಿಯ ತಳಿ ರಕ್ಷಣೆಗೆ ಮುಂದಾಗಬೇಕು. ಇದೇ ಸಂದರ್ಭದಲ್ಲಿ ಉತ್ತಮರಾಸುಗಳಿಗೆ ಬಹುಮಾನ ವಿತರಿಸಿ, ರೈತರಿಗೆ ಮಧ್ಯಾಹ್ನದ ಊಟವನ್ನು ವಿತರಿಸಿದರು.

ಬ್ರಹ್ಮರಥೋತ್ಸವ ವೈಭವ : ಶಿರಾ ತಾಲೂಕಿನ ತಾವರೆಕೆರೆ ಪ್ರಸಿದ್ಧ ಬಂಡಿ ಶ್ರೀರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ ಶಾಸಕ ಟಿ.ಬಿ. ಜಯಚಂದ್ರ, ವಿಧಾನ ಪರಿಷತ್ ಸದಸ್ಯ ಚಿದಾನಂದ ಎಂ ಗೌಡ, ತಹಸಿಲ್ದಾರ್ ಆನಂದಕುಮಾರ್ ರವರ ಸಮಕ್ಷಮದಲ್ಲಿ ಧಾರ್ಮಿಕ ಸಂಪ್ರದಾಯದಂತೆ ಅದ್ದೂರಿಯಾಗಿ ನಡೆಯಿತು, ರಾಜ್ಯದ ನಾನಾ ಜಿಲ್ಲೆಗಳ ಸಾವಿರಾರು ಭಕ್ತರು ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡು ಬಂಡಿ ಶ್ರೀರಂಗನಾಥ ಸ್ವಾಮಿ ದೇವರ ಕೃಪೆಗೆ ಪಾತ್ರರಾದರು.

ದೆಹಲಿ ವಿಶೇಷ ಪ್ರತಿನಿಧಿ, ಶಾಸಕ ಟಿ.ಬಿ.ಜಯಚಂದ್ರ, ವಿಧಾನಪರಿಷತ್ ಸದಸ್ಯ ಚಿದಾನಂದ ಎಂ ಗೌಡ, ತಹಸೀಲ್ದಾರ್ ಆನಂದಕುಮಾರ್, ಮಾಜಿ ಕನ್ವಿನರ್ ದೇವರಾಜ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ) ಆರ್ .ರಂಗನಾಥ್, ಸಮಾಜ ಸೇವಕ ಕಲ್ಕೆರೆ ರವಿಕುಮಾರ್, ಕಾಡುಗೊಲ್ಲ ಅಭಿವೃದ್ಧಿ ನಿಗಮ ಅಧ್ಯಕ್ಷ ಹಾರೋಗೆರೆ ಮಹೇಶ್, ಶಿರಾ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವು ಚಂಗಾವರ, ಎಪಿಎಂಸಿ ಮಾಜಿ ಅಧ್ಯಕ್ಷ ಶಶಿಧರ್ ಗೌಡ, ಶಿವು ಸ್ನೇಹಪ್ರಿಯ, ಮನೋಹರ ನಾಯಕ, ಶಿವಕುಮಾರ್ ನಾಯಕ, ಬಲರಾಮ್ ಸೇರಿದಂತೆ ಬಂಡಿ ಶ್ರೀರಂಗನಾಥ ಸ್ವಾಮಿ ದೇವಸ್ಥಾನ ಕೈವಾಡಸ್ತರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಭಾರತ ದೇಶಕ್ಕೆ ಸಂವಿಧಾನ ರಕ್ಷಾ ಕವಚ



ಹುಳಿಯಾರು: ಭಾರತ ದೇಶ ಬಲಿಷ್ಠ ರಾಷ್ಟ್ರಗಳ ಜತೆ ಪೈಪೋಟಿಯಲ್ಲಿ ನಿಲ್ಲುವ ಸಾಲಿಗೆ ಬಂದಿದೆ. ಆರ್ಥಿಕ ಮತ್ತು ಸಾಮಾಜಿಕವಾಗಿ ಮುಂಚೂಣಿಯಲ್ಲಿದೆ. ಇದಕ್ಕೆ ಸಂವಿಧಾನ ರಕ್ಷಾ ಕವಚವಾಗಿದೆ ಎಂದು ಸ್ವಾಮಿ ವಿವೇಕಾನಂದ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಅಶೋಕ್ ಮೂರ್ತಿ ತಿಳಿಹುಳಿಯಾರಿನಲ್ಲಿ ಸ್ವಾಮಿ ವಿವೇಕಾನಂದ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ) ಹುಳಿಯಾರು ವತಿಯಿಂದ ನಡೆಯುತ್ತಿರುವ ಕಿಡ್ಸ್ ಮತ್ತು ವಿವೇಕಾನಂದ ಇಂಟರ್ನ್ಯಾಷನಲ್ ಶಾಲೆಯಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.ಸಾಮಾಜಿಕ ನ್ಯಾಯದ ಪ್ರಬಲ ಅಸ್ತ್ರವಾಗಿರುವ ಸಂವಿಧಾನವು ನಮಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ನ್ಯಾಯ ಪಡೆಯುವ ಅಧಿಕಾರ ನೀಡಿದೆ. ಸಮಾಜದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಪ್ರಜಾಪ್ರಭುತ್ವದಲ್ಲಿದೆ ಎಂದರು.ಕಾರ್ಯಕ್ರಮವನ್ನು ಧ್ವಜಾರೋಹಣ ಮತ್ತು ಭಾರತಾಂಬೆ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳು ಪಥಸಂಚಲನದ ಮೂಲಕ ರಾಷ್ಟ್ರಧ್ವಜಕ್ಕೆ ಗೌರವ ಸಮರ್ಪಿಸಿ, ರಾಷ್ಟ್ರಗೀತೆ, ವಂದೇ ಮಾತರಂ, ಧ್ವಜ ಗೀತೆ, ರೈತ ಗೀತೆ ಗಳನ್ನು ಹಾಡಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ತೇಜಶ್ರೀ, ಶ್ರಾವ್ಯ, ಆರಾಧ್ಯ, ಧನ್ವಿತ್, ಮುಷ್ಫಿಯ, ಧನು, ಭುವನ ಕಾರ್ಯಕ್ರಮದ ಕುರಿತು ಮಾತನಾಡಿದರು.

ಶಿಕ್ಷಕರಾದ ಮನು ಮಾತನಾಡಿ ಸಂವಿಧಾನದಲ್ಲಿ ಮಹಿಳೆಯರಿಗೆ ನೀಡಿರುವ ಅವಕಾಶಗಳ ಬಗ್ಗೆ ತಿಳಿಸಿದರು. ಶಿಕ್ಷಕಿ ಅನಿತಾ ಮಾತನಾಡಿ ನಮ್ಮ ದೇಶದ ರಾಜ್ಯಗಳ ವೈಶಿಷ್ಟ್ಯತೆಯನ್ನು ಹಂಚಿಕೊಂಡರು. ಸಂಸ್ಥೆಯ ಸಂಯೋಜಕಿ ಪ್ರೇಮಲತಾ ಮಾತನಾಡಿ ವಿದ್ಯಾರ್ಥಿಗಳು ಮುಂದಿನ ಪ್ರಜೆಗಳು, ಉತ್ತಮ ವ್ಯಕ್ತಿಗಳಾಗಿ ದೇಶವನ್ನು ಅಭಿವೃದ್ಧಿಗೊಳಿಸುವಂತೆ ಕರೆ ನೀಡಿದರು,ಮುಖ್ಯ ಶಿಕ್ಷಕರಾದ ಪ್ರದೀಪ್ ಎಸ್.ಆರ್ ಮಾತನಾಡಿ ಸಂವಿಧಾನದ ಮಹತ್ವ ಸಂವಿಧಾನದಲ್ಲಿರುವಂತಹ ಕಾನೂನುಗಳು ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ರವರ ಪಾತ್ರ ಮುಂತಾದ ವಿಷಯಗಳ ಕುರಿತು ತಿಳಿಸಿದರು. ಕಾರ್ಯಕ್ರಮವನ್ನು ಶಿಕ್ಷಕಿ ಪೂಜಾ ಮತ್ತು ಲಕ್ಷ್ಮಿ ರವರು ನಿರೂಪಿಸಿದರು, ಶಿಕ್ಷಕಿ ವಿದ್ಯಾರವರು ಎಲ್ಲರನ್ನುಸ್ವಾಗತಿಸಿದರು,

## ತುಮಕೂರುಜಿಲ್ಲಾ ಕುರುಬರ ಸಂಘದ ವತಿಯಿಂದ ಸಂಗೊಳ್ಳಿ ರಾಯಣ್ಣರವರ ಹುತಾತ್ಮ ದಿನಾಚರಣೆ



ತುಮಕೂರು: ಸದಾಶಿವ ನಗರದಲ್ಲಿರುವ ಕೇಂದ್ರ ಸಂಘದ ಕಚೇರಿಯಲ್ಲಿ ಜಿಲ್ಲಾ ಕುರುಬರ ಸಂಘದ ವತಿಯಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 195ನೇ ಹುತಾತ್ಮ ದಿನಾಚರಣೆ ಹಾಗೂ 77ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಈ ವೇಳೆ ಜಿಲ್ಲಾ ಕುರುಬ ಸಂಘದ ಅಧ್ಯಕ್ಷರಾದ ಟಿ. ಆರ್. ಸುರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್ ,ಜಿಲ್ಲಾ ಉಪಾಧ್ಯಕ್ಷರಾದ ಎಂ.ಪಿ.ಕುಮಾರಸ್ವಾಮಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ಆಂತರಿಕ ಲೆಕ್ಕ ಪರಿಶೋಧಕರಾದ ಟಿ. ಇ. ರಘುರಾಮ್ ಏಕೇಶ್, ಸಹ ಕಾರ್ಯದರ್ಶಿ ಎಂ ಧರ್ಮರಾಜು, ಖಜಾಂಚಿ ಟಿ ಹೆಚ್ ಮಹದೇವ, ಬಸವರಾಜು,ಉಮೇಶ್ ಅನೇಕರು ಉಪಸ್ಥಿತರಿದ್ದರು.

# ಪೂರ್ವಿಕರ ಜಮೀನು ಕಬಳಿಕೆ, ನ್ಯಾಯಕ್ಕಾಗಿ ಹಕ್ಕುದಾರರ ಆಗ್ರಹ

## ನಕಲಿ ದಾಖಲೆ ಸೃಷ್ಟಿಸಿ ನಾಯಕ ಸಮುದಾಯದವರ ಜಮೀನು ಕಬಳಿಕೆ



ಪಾವಗಡ: ತಾಲ್ಲೂಕಿನ ದಳವಾಯಿಹಳ್ಳಿ ಗ್ರಾಮದ ಸರ್ವೇ ನಂಬರ್ 1 ರಲ್ಲಿ 11.28 ಗುಂಟೆ ಜಮೀನನ್ನು ವೈ.ಎನ್ ಹೊಸಕೋಟೆ ಗ್ರಾಮದ ರವಣಶೆಟ್ಟಿ ಎನ್ನುವವರು ನಕಲಿ ದಾಖಲೆ ಸೃಷ್ಟಿಸಿಕೊಂಡು ಜಮೀನು ಕಬಳಿಸಿಕೊಂಡಿದ್ದಾರೆಂದು ಜಮೀನಿನ ಮೂಲ ಮಾಲೀಕನ ಹಕ್ಕುದಾರ ರಾಮಪ್ಪ ಹಾಗೂ ಕುಟುಂಬಸ್ಥರು ಆರೋಪಿಸಿದ್ದಾರೆ.

ಇದೇ ಪಾವಗಡ ತಾಲ್ಲೂಕು, ವೈ.ಎನ್ ಹೊಸಕೋಟೆ ಹೋಬಳಿ, ಪೋತಗಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ದಳವಾಯಿಹಳ್ಳಿ ಗ್ರಾಮಕ್ಕೆ ಅಂಟಿಕೊಂಡಿರುವ ದಳವಾಯಿಹಳ್ಳಿ ಸರ್ವೇ.1 ರಲ್ಲಿ 11.28 ಗುಂಟೆ ಜಮೀನಿದ್ದು. ಇದು ನಮ್ಮ ತಾತನಾದ 03/03/1922 ರಲ್ಲಿ ವೆಂಕಟಯ್ಯ ನವರ ಬಳಿ 500 ರೂಪಾಯಿಗೆ 11.28 ಗುಂಟೆ ಜಮೀನು ಕ್ರಯ ಮಾಡಿಕೊಂಡಿದ್ದು. 1922 ರಿಂದ 1950ರವರೆಗೆ ಕೃಷಿ ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ಜಮೀನಲ್ಲಿರುವ 50ಕ್ಕೂ ಹೆಚ್ಚು ಹಣಸೆ ಮರಗಳಿದ್ದು ಹಣಸೆ ಹಣ್ಣು ಕಿತ್ತುಕೊಳ್ಳಲು ಮೂರ್ನಾಲ್ಕು ವರ್ಷಗಳ ಕಾಲ ಗುತ್ತಿಗೆಗೆ ಪಡೆದ ಶೆಟ್ಟಿ ರವಣಪ್ಪ. ತೀವ್ರವಾದ ಬರಗಾಲದಿಂದ ಜೀವನ ನಡೆಸಲು ವಿವಿಧ ನಗರಗಳಿಗೆ ವಲಸೆ ಹೋದ ನಂತರ. ನಾಯಕ ರವಣಯ್ಯ ಮತ್ತು ಶೆಟ್ಟಿ ರವಣಯ್ಯ ಇಬ್ಬರು ನಾನೇ ಎಂದು ನಕಲಿ ವಂಶವೃಕ್ಷ ಸೃಷ್ಟಿಸಿಕೊಂಡು ಕಂದಾಯ ಇಲಾಖೆ ಅಧಿಕಾರಿಗಳಿಗೆ ಹಣದಾಸೆ ತೋರಿಸಿ 1949 ರಲ್ಲಿ ನಕಲಿ ದಾಖಲೆಗಳ ಮೂಲಕ ಮ್ಯೂಟೇಶನ್, ಪಹಣಿ ತಿದ್ದುಪಡಿ ಮಾಡಿಸಿಕೊಂಡು ಸಂಪೂರ್ಣ ಜಮೀನನ್ನು ಕಬಳಿಸಿಕೊಂಡಿದ್ದಾರೆ. ಶೆಟ್ಟಿ ರವಣಯ್ಯ ರವರಿಗೆ ನಮ್ಮ ವಂಶಸ್ಥರಾದ ಯಾರೂ ಸಹ ಕ್ರಯ, ದಾನವಾಗಲಿ ಯಾವುದೂ ರೀತಿಯ ಪರಭಾರೆ ಮಾಡಿರುವುದಿಲ್ಲಾ. 1922 ರಿಂದ ಇಲ್ಲಿಯ ವರೆಗೆ ಕ್ರಯ, ವಿಭಾಗ,ದಾನ ಮತ್ತು ಪರಭಾರೆ ಮಾಡಿರುವ ಬಗ್ಗೆ ಕಂದಾಯ ಮತ್ತು ಉಪ ನೊಂದಣಿ ಕಛೇರಿಯಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ನಾಯಕ ರವಣಯ್ಯನಿಗೂ ಶೆಟ್ಟಿ ರವಣಪ್ಪನಿಗೆ ಏನು ಸಂಬಂಧವೇ ಇರುವುದಿಲ್ಲಾ. ನಮ್ಮ ವಂಶಸ್ಥರ ಮೇಲೆ ದಬ್ಬಾಳಿಕೆ ಮಾಡಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಮೊಸ ವೆಸಗಿದ್ದಾರೆ ಎಂದು ಆರೋಪಿಸಿ ಸಂಬಂಧಪ್ಪ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ನಮ್ಮ ಪೂರ್ವಜರ ಆಸ್ತಿಯನ್ನು ನಮ್ಮಗಳಿಗೆ ಖಾತೆ ಪಹಣಿ ಮಾಡಿಕೊಡುವಂತೆ ಆಗ್ರಹಿಸಿದರು.

ಈ ಬಗ್ಗೆ ನನಗೆ ಮಾಹಿತಿ ತಿಳಿದಿಲ್ಲ ದಳವಾಯಿಹಳ್ಳಿ ಗ್ರಾಮದ ಸ. ನಂ 1 ರ ಜಮೀನಿನ ದಾಖಲೆಗಳನ್ನು ಪರಿಶೀಲನೆ ಮಾಡಲಾಗುವುದು ದಾಖಲೆಗಳು ನಕಲಿ ಮಾಡಿರುವುದು ಖಚಿತ ವಾದರೆ ಕ್ರಮ ವಹಿಸಿ ಮೂಲ ಖಾತೆದಾರರಿಗೆ ಖಾತೆ ಪಹಣಿ ಮಾಡಿಕೊಳ್ಳಲಾಗುವುದು ಎಂದು ವೈ ಎನ್ ಹೊಸಕೋಟೆ ಹೋಬಳಿ ಕಂದಾಯ ಅಧಿಕಾರಿ ಕಿರಣ್ ಕುಮಾರ ಹೇಳಿದರು.

### ಕೋಟ್–1

ಶೆಟ್ಟಿ ರವಣಪ್ಪ ಇವರು ಗ್ರಾಮದ ಮೂಲ ವಾಸಿ ಅಲ್ಲಾ. ಇವರು ನಕಲಿ ದಾಖಲೆ ಸೃಷ್ಟಿಸಿಕೊಂಡು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ಗ್ರಾಮಸ್ಥರ ಮನೆ ಕೆಡವಲು ಮುಂದಾಗಿ ದೌರ್ಜನ್ಯ ಮಾಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಕಂದಾಯ, ಭೂದಾಖಲೆ ಅಧಿಕಾರಿಗಳು ಮೂಲ ದಾಖಲೆಗಳನ್ನು ಪರಿಶೀಲಿಸಿ ಮೂಲ ಖಾತೆದಾರರಿಗೆ ಮತ್ತು ಮನೆ ನಿರ್ಮಿಸಿಕೊಂಡ ಗ್ರಾಮಸ್ಥರಿಗೆ ನ್ಯಾಯ ದೊರಕಿಸಿಕೊಡಬೇಕಿದೆ

ಸುದರ್ಶನ್. ದಳವಾಯಿಹಳ್ಳಿ ಗ್ರಾಮಸ್ಥ.

### ಕೋಟ್–2

ಸ.ನಂ 1 ರಲ್ಲಿನ 11.28 ಗುಂಟೆ ಜಮೀನು ರವಣಪ್ಪ ಬಿನ್ ಸಿದ್ದಪ್ಪ ರವರಿಗೆ ಸೇರಿದ್ದು. ನಮ್ಮ ತಾತನ ಕಾಲದಿಂದ ಹುಲ್ಲು ಬಣವೆ ಹಾಕಿಕೊಂಡು ಬರುತ್ತಿದ್ದೇವು. ಇತ್ತೀಚಿನ ವರ್ಷಗಳಿಂದ ಶೆಟ್ಟಿ ರವಣಪ್ಪ ರವರ ಸುಳ್ಳು ದಾಖಲೆ ಸೃಷ್ಟಿಸಿಕೊಂಡು 2003 ರಿಂದ ಮನೆ ನಿರ್ಮಿಸಿಕೊಂಡಿರುವ ಗ್ರಾಮಸ್ಥರಿಗೆ ಕಿರಿಕಿರಿ ಮಾಡುತ್ತಿದ್ದಾರೆ. ಆದ್ದರಿಂದ ಅಧಿಕಾರಿಗಳು ಮೂಲ ಹಾಗೂ ನಕಲಿ ಖಾತೆದಾರರ ದಾಖಲೆ ಪರಿಶೀಲಿಸಿ ನ್ಯಾಯ ದೊರಕಿಸಿಕೊಡಬೇಕಿದೆ.

ರಮೇಶ್. ದಳವಾಯಿಹಳ್ಳಿ ಗ್ರಾಮಸ್ಥ.

ಈ ವೇಳೆ ಜಮೀನಿನ ಮೂಲ ಮಾಲೀಕರ ಹಕ್ಕುದಾರರಾದ ರಾಮಾಂಜಪ್ಪ,ತಿಮ್ಮರಾಜು, ರಾಜಮ್ಮ, ಅಲುವೇಲಮ್ಮ, ಹನುಮಂತರಾಯ,ಎಂ. ಹನುಮಂತರಾಯ,ಅಕ್ಕಮ್ಮ,ಚಂದ್ರಣ್ಣ, ಮಂಜುನಾಥ, ಗ್ರಾಮಸ್ಥರಾದ ಈರಣ್ಣ,ರಾಜಶೇಖರ್, ಸುದರ್ಶನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೆರೆಗೋಡಿ-ರಂಗಾಪುರ ಸುಕ್ಷೇತ್ರದಲ್ಲಿ ಶ್ರೀಗುರು ಸಪ್ತಾಹ, ಧಾರ್ಮಿಕ ಸಮಾರಂಭ



ತಿಪಟೂರು : ಭಕ್ತರ ಸಹಾಕರ, ಹಿರಿಯ ಶ್ರೀಗಳ ಕೃಪಾಶೀರ್ವಾದಿಂದ ಸಮಾಜದ ಏಳಿಗೆಗೆ ಮಠವು ಶ್ರಮಿಸುತ್ತಾ ಬಂದಿದೆ ಎಂದು ಕೆರೆಗೋಡಿ-ರಂಗಾಪುರ ಸುಕ್ಷೇತ್ರಾಧ್ಯಕ್ಷರಾದ ಶ್ರೀ ಗುರುಪರದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಕೆರೆಗೋಡಿ-ರಂಗಾಪುರ ಸುಕ್ಷೇತ್ರದಲ್ಲಿ ಶನಿವಾರ ನಡೆದ ಶ್ರೀಗುರು ಸಪ್ತಾಹದ ಅಂಗವಾಗಿ ನಡೆದ ಧಾರ್ಮಿಕ ಸಮಾರಂಭ ಹಾಗೂ ಸುವರ್ಣ ಮಹೋತ್ಸವದ ಅಂಗವಾಗಿ ಮಾತನಾಡಿದರು.

ಸಮಾಜ ಮತ್ತು ದೇಶದ ಏಳಿಗೆಗೆ ದುಡಿಯುತ್ತಿರುವ ಮಠಮಾನ್ಯಗಳ ಅಭಿವೃದ್ಧಿಗೆ ಭಕ್ತರ ಸಹಕಾರವೇ ಕಾರಣವಾಗಿದೆ. ಶ್ರೀಮಠವು ಭಕ್ತರ ಸಹಕಾರ ಹಾಗೂ ಹಿರಿಯ ಶ್ರೀಗಳವರ ತಪಸ್ಸು, ಕಾಯಕ, ಧರ್ಮಮಾರ್ಗ ಹಾಗೂ ಭಿಕ್ಷಾಟನೆಯೇ ಕ್ಷೇತ್ರ ಸರ್ವತೋಮುಖ ಅಭಿವೃದ್ಧಿಯತ್ತ ಸಾಗಲು ಕಾರಣವಾಗಿದೆ. ಸಮಾಜದ ಏಳಿಗೆಗಾಗಿ ಮಠವೂ ಕಾರ್ಯನಿರ್ವಹಿಸುತ್ತಾ ಭಕ್ತರ ಹಿತವನ್ನು ಕಾಪಾಡಿಕೊಂಡು ಅಭಿವೃದ್ಧಿ ಹೊಂದುತ್ತಾ ಬಂದಿದೆ. ಮುಂದಿನ ದಿನಗಳಲ್ಲಿಯೂ ಭಕ್ತರ ಬಳಿ ಭಿಕ್ಷಾಟಣೆಯ ಮೂಲಕವೇ ಮಠದ ಅಭಿವೃದ್ಧಿಯ ಕಾರ್ಯಗಳು, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕಾರ್ಯಗಳು ನಡೆಲಿವೆ ಎಂದರು.

ಗುಬ್ಬಿಯ ಗೊಲ್ಲಹಳ್ಳಿಯ ಶ್ರೀ ಸಿದ್ಧಲಿಂಗೇಶ್ವರ ಮಠದ ಶ್ರೀ ವಿಭವ ವಿದ್ಯಾಶಂಕರ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ ದೇಶದಲ್ಲಿ ಕೃಷಿ ಪರಂಪರೆ ಮತ್ತು ಋಷಿ ಪರಂಪರೆ ಎರಡೂ ಮುಖ್ಯವಾಗಿವೆ. ಕೃಷಿ ಪರಂಪರೆಯೂ ಅನ್ನ ನೀಡಿ ಕಾಪಾಡಿದರೆ ಋಷಿ ಪರಂಪರೆಯೂ ಜ್ಞಾನ ನೀಡಿ ಕಾಪಾಡಿದೆ. ಇದೇ ನಿಟ್ಟಿನಲ್ಲಿ ರಂಗಾಪುರ ಸುಕ್ಷೇತ್ರವೂ ಶತಮಾನಗಳ ಇತಿಹಾಸ ಹೊಂದಿದ್ದು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಅಭಿವೃದ್ಧಿಗೆ ಕಾರಣವಾಗಿದೆ. ರಂಗಾಪುರ ಶ್ರೀಮಠವು ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ್ದು ಭಿಕ್ಷಾಟನೆಯ ಮೂಲಕ, ಭಕ್ತರ ಸಹಕಾರದಿಂದ ಅಭಿವೃದ್ಧಿಯಾಗುತ್ತಿದೆ. ಹಿಂದಿನ ಶ್ರೀಗಳ ತಪಸ್ಸಿನ ಶಕ್ತಿ ಹೆಚ್ಚಿದ್ದು ಕೆರೆ, ಕಲ್ಯಾಣಿ, ಬಾವಿ, ಗುಡಿತೋಪುಗಳನ್ನು ನಿರ್ಮಿಸಿ ಅನುಕೂಲ ಕಲ್ಪಿಸಿಕೊಟ್ಟಿದ್ದರು. ಅವರ ಹಾದಿಯಲ್ಲಿ ನಡೆಯುತ್ತಿರುವ ಇಂದಿನ 7ನೇ ಶ್ರೀಗಳು ಸಹ ಭಿಕ್ಷಾಟನೆಯ ಮೂಲಕ ಮಠದ ಅಭಿವೃದ್ಧಿ ಶ್ರಮಿಸುತ್ತಿದ್ದಾರೆ ಎಂದರು.

ಅರಸೀಕೆರೆಯ ಮಾಡಾಳು ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಮಾತನಾಡಿ ಕೆರೆಗೋಡಿ-ರಂಗಾಪುರ ಸುಕ್ಷೇತ್ರ ಶಕ್ತಿ ಪೀಠವಾಗಿದ್ದು ಗುರುಗಳ ಪವಾಡದ ಶಕ್ತಿ ಮತ್ತು ಕೃಪೆ ಭಕ್ತರ ಮೇಲಿದ್ದು, ಈ ಕ್ಷೇತ್ರ ಜಾತ್ಯಾತೀತ ಮನೋಭಾವನೆ ಹೊಂದಿದೆ. ಮಠದಲ್ಲಿ ಸಪ್ತಾಹದಲ್ಲಿ ಅಖಂಡ ಭಜನೆಗೆ ಪ್ರಖ್ಯಾತಿಯನ್ನು ಹೊಂದಿದ್ದು, ಮನುಷ್ಯನ ಪಂಚೇಂದ್ರಿಯನ್ನು ನಿಗ್ರಹಿಸುವ ಶಕ್ತಿಯೂ ಭಜನೆಗೆ ಇದೆ. ಇಂತಹ ಭಜನೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಷಡಕ್ಷರಿ ಮಾತನಾಡಿ ಮಠವೂ ಜಾತ್ಯಾತೀತವಾಗಿ ಕಾರ್ಯನಿರ್ವಹಣೆ ಮಾಡುತ್ತಾ ಬಂದಿದ್ದು, ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದವರಿಗೆ ಶ್ರೀಗಳ ಆಶೀರ್ವಾದ ಯಾವಾಗಲೂ ಇರುತ್ತದೆ. ಇಂದಿಗೂ ಶ್ರೀಗಳು ಯಾವುದಕ್ಕೂ ಅಪೇಕ್ಷಪಟ್ಟಿಲ್ಲ, ಭಕ್ತರ ಸಹಕಾರದಿಂದ ಮಾತ್ರವೇ ಮಠದ ಅಭಿವೃದ್ಧಿ ಮಾಡುತ್ತಾ ಸಮಾಜದ ಏಳಿಗೆಗೆ ಶ್ರಮಿಸುತ್ತಾ ಬಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಆದಿಹಳ್ಳಿ ಆದಿಲಕ್ಷ್ಮೀ ಕ್ಷೇತ್ರದ ಶಿವಾನಂದ ಸ್ವಾಮೀಜಿ, ತುರುವೇಕೆರೆ ಶಾಸಕ ಎಂ.ಟಿ.ಕೃಷ್ಣಪ್ಪ, ನಿವೃತ್ತ ಎಸಿಪಿ ಲೋಕೇಶ್ವರ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾದ ಹಾಸನ ಅಧ್ಯಕ್ಷ ನವಿಲೆ ಪರಮೇಶ್ ನೆಲಮಂಗಲದ ಯಂಟಗಾನಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ನಿರಜಾ ಲೋಕೇಶ್, ತಹಶೀಲ್ದಾರ್ ಜಿ.ವಿ.ಮೋಹನ್ ಕುಮಾರ್, ಮತ್ತಿತರರು ಇದ್ದರು.

# ಭಾರತ ಬಲಿಷ್ಠ ರಾಷ್ಟ್ರವಾಗಿರಲು ಸಂವಿಧಾನವೇ ಪ್ರಮುಖಕಾರಣ



ತುಮಕೂರು : ಭಾರತ ಬಲಿಷ್ಠ ರಾಷ್ಟ್ರವಾಗಿರಲು ಸಂವಿಧಾನವೇ ಪ್ರಮುಖಕಾರಣಎಂದುಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದರಾಮಚಂದ್ರದತ್ತಾತ್ರೇಯ ಹುದ್ದಾರಅವರು ಹೇಳಿದರು. ತುಮಕೂರು ವಿಶ್ವವಿದ್ಯಾನಿಲಯದಲ್ಲಿ 77ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದಆಚರಿಸಲಾಯಿತು.ಧ್ವಜಾರೋಹಣ ನೆರವೇರಿಸಿ ಮಾತನಾಡಿದಅವರು ಸಂವಿಧಾನವು ನಾಗರಿಕರಿಗೆ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ನೀಡಿದ್ದು, ಅದರಗೌರವ ಮತ್ತು ಭದ್ರತೆಯನ್ನುಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಹೊಣೆಗಾರಿಕೆಎಂದು ತಿಳಿಸಿದರು.

ಪ್ರಜಾಪ್ರಭುತ್ವದ ಮೌಲ್ಯಗಳು ಜೀವಂತವಾಗಿರಬೇಕಾದರೆ ಸಂವಿಧಾನದಅಡಿಪಾಯಗಟ್ಟಿಯಾಗಿರಬೇಕುಎಂದರು.

ಇದೇ ವೇಳೆ, ಇಂದಿನ ಮಕ್ಕಳಲ್ಲಿ ಮತ್ತುಯುವಜನರಲ್ಲಿ ಹೆಚ್ಚುತ್ತಿರುವಅತಿಯಾದ ಮೊಬೈಲ್ ಬಳಕೆ ಅಪಾಯಕಾರಿಯಾಗಿದ್ದು ಮೊಬೈಲ್‌ಗಳಿಗೆ ಅಂಟಿಕೊಂಡ ಬದುಕು ಶಾರೀರಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಹಾನಿಕಾರಕವಾಗುತ್ತದೆ. ಪುಸ್ತಕ ಓದು, ಕ್ರೀಡೆಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಗಮನಹರಿಸಿ ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ. ವೆಂಕಟೇಶ್ವರಲುಅವರು, ಭಾರತದಅತ್ಯಂತ ಪ್ರಬಲ ಶಕ್ತಿಯಾಗಿರುವುದು ನಮ್ಮ ಸಂವಿಧಾನವೇಆಗಿದ್ದು, ಅದುದೇಶದಏಕತೆ ಮತ್ತು ಸಮಗ್ರತೆಗೆ ಬುನಾದಿಯಾಗಿದೆ. ಸಂವಿಧಾನಎಂದರೆ ಕೇವಲ ಪುಸ್ತಕಕ್ಕೆ ಸೀಮಿತವಾಗಿರುವುದಲ್ಲ, ಅದರ ತತ್ವಗಳನ್ನು ಪ್ರತಿಯೊಬ್ಬರೂತಮ್ಮಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ನಮ್ಮದೇಶಇಂದುತಂತ್ರಜ್ಞಾನಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ಇಂದಿನ ಕಾಲಕ್ಕೆ ತಕ್ಕಂತೆತಂತ್ರಜ್ಞಾನದ ಸಮರ್ಪಕ ಅಳವಡಿಕೆ ಅಗತ್ಯವಾಗಿದೆಎಂದರು. ಜೊತೆಗೆ, ತಾಯಿ ಮತ್ತುಜನ್ಮಭೂಮಿಗೆಗೌರವ ನೀಡುವ ಸಂಸ್ಕಾರವನ್ನು ಯುವಪೀಳಿಗೆ ಬೆಳೆಸಿಕೊಳ್ಳಬೇಕು ಎಂದುಕರೆ ನೀಡಿದರು.ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಕುಲ ಸಚಿವರಾದ ಪ್ರೊ. ಮೋಹನ್‌ಎಚ್.ಎಸ್., ಹಣಕಾಸು ಅಧಿಕಾರಿಗಳಾದ ನರಸಿಂಹಮೂರ್ತಿ ,ಕಾರ್ಯಕ್ರಮದ ಸಂಯೋಜಕರಾದಡಾ. ಎ. ಎಂ. ಮಂಜುನಾಥ, ಸಿಬಂತಿ ಪದ್ಮನಾಭ ಕೆ.ವಿ. ಸೇರಿದಂತೆಇನ್ನಿತರರಿದ್ದರು.

# ದತ್ತಿ ಪ್ರಶಸ್ತಿ-ಕವನಕ್ಕೆ ಮಲ್ಲಿಕಾರ್ಜುನ ಹೊಸಪಾಳ್ಯ, ಕಥೆಗೆ ಹೆಚ್.ವಿ.ವೆಂಕಟಾಚಲ ರಿಗೆ ಪ್ರಥಮ ಬಹುಮಾನ



ತುಮಕೂರು :ಕರ್ನಾಟಕ ಲೇಖಕಿಯರ ಸಂಘ, ತುಮಕೂರುಜಿಲ್ಲಾ ಶಾಖೆಯು ಏರ್ಪಡಿಸಿದ್ದ ಕವನ ಮತ್ತುಕಥೆದತ್ತಿ ಪ್ರಶಸ್ತಿ ಸ್ಪರ್ಧೆಯಲ್ಲಿ ಕವನ ವಿಭಾಗದಲ್ಲಿ ಮಲ್ಲಿಕಾರ್ಜುನ ಹೊಸಪಾಳ್ಯ ಮತ್ತುಕಥೆ ವಿಭಾಗದಲ್ಲಿ ಹೆಚ್.ವಿ.ವೆಂಕಟಾಚಲ ಅವರುಗಳು ಪ್ರಥಮ ಬಹುಮಾನ ಪಡೆದಿದ್ದಾರೆ.

ಶ್ರೀಮತಿ ಲಕ್ಷ್ಮೀದೇವಮ್ಮಗೋವಿಂದಯ್ಯದತ್ತಿ ಕವನ ಸ್ಪರ್ಧೆಗೆ46 ಕವಿತೆಗಳ ಬಂದಿದ್ದು. ಅವುಗಳನ್ನು ಕವಿತೆತೀರ್ಪುಗಾರರಾದಡಾ. ಗೀತಾ ವಸಂತ್‌ರವರು ಪರಿಶೀಲಿಸಿ ಮಲ್ಲಿಕಾರ್ಜುನ ಹೊಸಪಾಳ್ಯರವರ 'ಕುರುಡುಚಿತ್ತೆಯ ನೆನಕೆ' ಕವನಕ್ಕೆ ಪ್ರಥಮ ಬಹುಮಾನ ಪಡೆದರೆ, ತಿಲಕ್ ಲಕ್ಷ್ಮೀಪರಅವರ 'ಸೂಜಿ ಮತ್ತುದಾರ' ಕವನಕ್ಕೆ ದ್ವಿತೀಯ ಬಹುಮಾನ, ಡಾ.ಗಿರಿಜಮ್ಮ ಅವರ 'ತರಗೆಲೆಯ ಮಾತು' ಕವನಕ್ಕೆ ತೃತೀಯ ಬಹುಮಾನ ಮತ್ತು ಮಾರುತಿ ಪ್ರಸಾದ್‌ರವರ 'ಪ್ರೀತಿ' ಕವನಕ್ಕೆ ಹಾಗೂ ಆಶಾ ಸಚಿನ್‌ಅವರ 'ಐ.ವಿ.ಎಫ್‌ಅಮ್ಮ' ಕವನಕ್ಕೆ ಸಮಾದಾನಕರ ಬಹುಮಾನ ನೀಡಲಾಯಿತು.ಶ್ರೀಮತಿ ನಾಗರತ್ನ ಅ.ನಾ.ಶೆಟ್ಟಿದತ್ತಿಕಥಾ ಸ್ಪರ್ಧೆಗೆ 22 ಕಥೆಗಳು ಬಂದಿದ್ದು, ಅವುಗಳನ್ನು ಕಥೆಗಳ ತೀರ್ಪುಗಾರರಾದ ಬಾ.ಹ. ರಮಾಕುಮಾರಿರವರು ಪರಿಶೀಲಿಸಿ ಹೆಚ್.ವಿ.ವೆಂಕಟಾಚಲರವರ 'ಋಣತೀರಿತು' ಕಥೆಪ್ರಥಮ ಬಹುಮಾನ ಪಡೆದರೆ, ಶೈಲಜಾ .ಜೆ.ಕೆ.ಅವರ 'ಅಮ್ಮಂದಿರಿಗೂಒಂದುಡೇ' ಕಥೆಗೆ ದ್ವಿತೀಯ ಬಹುಮಾನ,ನರಸಿಂಹ ರಾಜು ಸಿರಿವರ ಅವರ 'ಶಿವಲಿಂಗಮ್ಮನ ಕೋಣಗಳು' ಕಥೆಗೆತೃತೀಯ ಬಹುಮಾನ ಮತ್ತುಮಂಜುಳಾ.ಎಂ.ಎಸ್.ರವರ '(ಸ) ಕಾರಣ'ಕಥೆಗೆ ಸಮಾದಾನಕರ ಬಹುಮಾನ ನೀಡಲಾಯಿತು.ಜನವರಿ25ರಂದು ತುಮಕೂರಿನಕನ್ನಡ ಭವನದಲ್ಲಿ ನಡೆದದತ್ತಿ ಪ್ರಶಸ್ತಿ ಬಹುಮಾನ ವಿತರಣಾ ಸಮಾರಂಭದಲ್ಲಿಕವನ-ಕಥೆ ಬಹುಮಾನಿತರಿಗೆ ನಗದು ಬಹುಮಾನ ಮತ್ತುಪ್ರಶಂಸನಾ ಪತ್ರನೀಡಿಗೌರವಿಸಲಾಯಿತು.

# ಅಂಬೇಡ್ಕರ್ ಅವರು ಕೇವಲ ಸಂವಿಧಾನ ರಚನೆ ಸಮಿತಿಯ ಅಧ್ಯಕ್ಷರಲ್ಲ ಅಧುನಿಕ ಭಾರತದ ಆಶಾಕಿರಣ ಮಂಜುನಾಥ್





ಕೊರಟಗೆರೆ;-ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಕೇವಲ ಸಂವಿಧಾನ ರಚನೆ ಸಮಿತಿಯ ಅಧ್ಯಕ್ಷರಲ್ಲ, ಅಧುನಿಕ ಭಾರತದ ಆಶಾಕಿರಣ, ಸಮಾನತೆ ಸಾರಿದ ಹರಿಕಾರ ಎಂದು ತಹಸೀಲ್ದಾರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ಏರ್ಪಡಿಸಲಾಗಿದ್ದ 77ನೇ ಭಾರತ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಡಾ.ಬಿ.ಆರ್‌ಅಂಬೇಡ್ಕರ್ ಅವರ ಕಠಿಣ ಶ್ರಮದಿಂದ ವಿವಿಧ ದೇಶಗಳ ಸಂವಿಧಾನಗಳನ್ನ ಅಧ್ಯಯನ ಮಾಡಿ ಭಾರತದಂತಹ ವೈವಿಧ್ಯಮಯ ಕಲೆ, ಸಾಹಿತ್ಯ ಧಾರ್ಮಿಕ ಹಾಗೂ ದೇಶದ ಪ್ರತಿಯೊಬ್ಬರು ಕೂಡಿ ಬಾಳುವಂತಹ ಸಂವಿಧಾನವನ್ನ ರಚನೆ ಮಾಡಿ ಈ ದೇಶದಲ್ಲಿ ಎಲ್ಲಾರೂ ಸಮಾನತೆಯಿಂದ ಬಾಳಬೇಕು ಎನ್ನುವ ಉದ್ದೇಶದಿಂದ ಕಾನೂನನ್ನ ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಅದನ್ನ ನಾವುಗಳು ಪ್ರತಿಯೊಬ್ಬರು ಪಾಲಿಸಬೇಕು ಎಂದರು.

ಸಮಾಜದಲ್ಲಿನ ತುಳಿತಕ್ಕೊಳಗಾದವರು, ಮಹಿಳೆಯರು ಮತ್ತು ಕಾರ್ಮಿಕ ಹಕ್ಕುಗಳಿಗೆ ಸಂವಿಧಾನದಲ್ಲಿ ವಿಶೇಷ ಸ್ಥಾನಮಾನ ನೀಡಿ ಸಾಮಾಜಿಕ ನ್ಯಾಯವನ್ನ ನೀಡಿದ್ದಾರೆ. 2047ನೇ ಇಸವಿಗೆ ಭಾರತವನ್ನ ವಿಕಸಿತ ಭಾರತವನ್ನಾಗಿ ಮಾಡಿ ನಾಲ್ಕು ಸ್ತಂಭಗಳಾದ ಯುವಶಕ್ತಿ, ಬಡವರ ಕಲ್ಯಾಣ, ಮಹಿಳಾ ಕಲ್ಯಾಣ, ಮತ್ತು ಅನ್ನದಾತರಿಗೆ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದಾರೆ. ಭಾರತದ ಯೋಜನೆಯಲ್ಲಿ ರಕ್ಷಣೆ ಬಾಹ್ಯಕಾಶ ಮತ್ತು ತಂತ್ರಜ್ಞಾನದಲ್ಲಿ ಭಾರತ ಇಂದು ಬೇರೆ ಬೇರೆ ದೇಶಗಳನ್ನ ಮೀರಿ ಭಾರತದಲ್ಲಿ ತಯಾರಾದ ಶಸ್ತ್ರಾಸ್ತ್ರಗಳನ್ನ ಈ ವರ್ಷದ ಪೇರಡ್‌ನಲ್ಲಿ ಬಳಸಲಾಗುತ್ತಿದೆ ಎಂದು ತಿಳಿಸಿದರು.

ಇದೆ ಸಂದರ್ಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದೊಡ್ಡ ನರಸಪ್ಪ, ಆಯುರ್ವೇದದಲ್ಲಿ ಸಾಧನೆ ಮಾಡಿದ ಚಿಕ್ಕಿರಪ್ಪ, ಪತ್ರಕರ್ತ ಸಂಘದ ಅಧ್ಯಕ್ಷಎನ್.ಮೂರ್ತಿ, ಪೊಲೀಸ್ ಇಲಾಖೆಯ ಶಶಿಕುಮಾರ್, ನಿವೃತ್ತಯೋಗ ಶಿಕ್ಷಕಿ ನಾಗರತ್ನಮ್ಮ, ಅಗ್ನಿಶಾಮಕ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹೋಮ್ ಗಾರ್ಡ್ ಲಕ್ಷ್ಮೀಪತಿ ಅವರಿಗೆ ಹಾಗೂ ಎಸ್‌ಎಸ್‌ಎಲ್‌ಸಿ ಯಲ್ಲಿ ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ನಿಶ್ಚಿತ.ಕೆ, ಮದನ್, ದನುಷ್ ಗೌಡ ಅವರಿಗೆ ತಾಲೂಕು ಆಡಳಿತ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿತಾಪಂ ಇಓ ಅಪೂರ್ವಅನಂತರಾಮು, ಪಪಂ ಸಿಇಓ ಉಮೇಶ್, ಫೈರೋಜ್ ಬೇಗಂ, ಸಿಪಿಐ ಅನಿಲ್, ಪಿಎಲ್‌ಡಿ ಬ್ಯಾಂಕ್‌ಅಧ್ಯಕ್ಷಚಿಕ್ಕರಂಗಯ್ಯ, ನೌಕರರ ಸಂಘದಅಧ್ಯಕ್ಷರುದ್ರೇಶ್, ಸಾಹಿತ್ಯ ಪರಿಷತ್‌ಅಧ್ಯಕ್ಷ ಈರಣ್ಣ, ಎಸ್ಸಿ ಎಸ್ಟಿ ನೌಕರರ ಸಂಘದಅಧ್ಯಕ್ಷ ಲಕ್ಷ್ಮೀಪುತ್ರ, ಜಿಲ್ಲಾಧಾರ್ಮಿಕ ಪರಿಷತ್ ಸದಸ್ಯರಂಗರಾಜು, ಪಪಂ ಮಾಜಿ ಸದಸ್ಯ ಲಕ್ಷ್ಮೀನಾರಾಯಣ್, ಮುಖಂಡರಾದ ನಯಾಜ್, ಅಟಿಕನಾಗರಾಜು, ಮಾರುತಿ, ಅಧಿಕಾರಿಗಳಾದ ಗುರುಮೂರ್ತಿ, ರಾಮಪ್ರಸಾದ್, ಆರ್‌ಐ ಬಸವರಾಜು, ಮಧುಸೂದನ್, ಸೇರಿದಂತೆ ನಾಲ್ವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಲೇಖಕಿ ಮರಿಯಂಬಿ ನಿರೂಪಿಸಿ, ಶ್ವೇತರಾಣಿ ಸ್ವಾಗತಿಸಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109



ತುಮಕೂರು ಮಹಾನಗರಪಾಲಿಕೆಯಿಂದ ಸೋಮವಾರ 77ನೇ ಗಣರಾಜ್ಯೋತ್ಸವದ ಅಂಗವಾಗಿ ಆಯುಕ್ತರಾದ ಶುಭಾ ಧ್ವಜಾರೋಹಣ ನೆರವೇರಿಸಿ ಧ್ವಜವಂದನೆ ಸ್ವೀಕರಿಸಿದರು. ಈ ವೇಳೆ ಪಾಲಿಕೆಯ ವಿವಿಧ ವಿಭಾಗಗಳ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.



ತುಮಕೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 195ನೇ ಪುಣ್ಯಸ್ಮರಣೆ ಆಚರಿಸಲಾಯಿತು. ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ರಾಯಣ್ಣನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ರೇವಣ್ಣಸಿದ್ಧೇಶ್ವರ ಮಠದ ಬಿಂಧುಶೇಖರ ಒಡೆಯರ್, ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ, ಉಪವಿಭಾಗಾಧಿಕಾರಿ ನಾಹಿದಾ ಜಮ್ ಜಮ್, ತಹಶೀಲ್ದಾರ್ ರಾಜೇಶ್ವರಿ, ಕುರುಬ ಸಮಾಜದ ಮುಖಂಡರಾದ ಡಾ.ಎಸ್.ನಾಗಣ್ಣ, ಲಕ್ಷ್ಮೀನರಸಿಂಹರಾಜು, ಇಂದ್ರಕುಮಾರ್, ಅನಿಲ್‌ಕುಮಾರ್, ಧರ್ಮರಾಜ್, ಕೆಂಪರಾಜು, ರಘುರಾಮ್ ಮೊದಲಾದವರು ಭಾಗವಹಿಸಿದ್ದರು.



# ಭಾರತದ ಏಕತೆಗೆ ಸಂವಿಧಾನ ಕಾರಣ

ಕುಣಿಗಲ್: ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ 541 ಪ್ರಾಂತ್ಯಗಳ ಮೂಲಕ ಹಂಚಿಹೋಗಿದ್ದ ಭಾರತವನ್ನು, ಸಂವಿಧಾನ ಒಗ್ಗೂಡಿಸಿದೆ. ನಮ್ಮ ದೇಶಕ್ಕೆ ನಾವೇ ರಚಿಸಿಕೊಂಡ ಸಂವಿಧಾನ, ನಮ್ಮ ಹೆಮ್ಮೆ. ಭಾರತದ ಏಕತೆಯನ್ನು ವಿಶ್ವಕ್ಕೆ ಸಾರಿದ ದಿನವೇ ಗಣರಾಜ್ಯೋತ್ಸವ ಆಚರಣೆ ಎಂದು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿ.ಸಿ.ಶಿವಣ್ಣ ತಿಳಿಸಿದರು.

ಅವರು ಪಟ್ಟಣದ ಸರ್ಕಾರಿ ನೌಕರರ ಸಂಘದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ರವರು ವಿಶ್ವದ ವಿವಿಧ ಸಂವಿಧಾನಗಳನ್ನು ಅಧ್ಯಯನ ಮಾಡಿ, ಭಾರತಕ್ಕೆ ಹೊಂದುವಂತಹ ಸಂವಿಧಾನ ರಚನೆಯನ್ನು ಮಾಡಿದ್ದು, ಸಂವಿಧಾನ ಜಾರಿಗೆ ಮುನ್ನಾ ಅನೇಕ ಚರ್ಚೆ, ವಿಮರ್ಶೆಗಳು ನಡೆದಿವೆ. ಸಂವಿಧಾನವನ್ನು ಅರ್ಥೈಸಿ, ಭವಿಷ್ಯದ ಯುವಜನರಿಗೆ ಸಂವಿಧಾನದ ಅರಿವನ್ನು ನೀಡಬೇಕೆಂದರು.

ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಶಿವರಾಮಯ್ಯ ಮಾತನಾಡಿ ಸಂವಿಧಾನ ಕೇವಲ ಒಂದು ಪುಸ್ತಕವಲ್ಲ, ಅದು ಭಾರತೀಯರಿಗೆ ಸ್ವಾತಂತ್ರ್ಯ, ಸಮಾನತೆ, ನ್ಯಾಯದ ಹಕ್ಕನ್ನು ನೀಡಿ ಶಕ್ತಿ ತುಂಬಿದೆ. ಹಕ್ಕುಗಳ ಜೊತೆ ನಮ್ಮ ಕರ್ತವ್ಯವನ್ನು ಅರಿತು ಬದುಕಬೇಕು. ದೇಶದ ಪ್ರಗತಿಗೆ ಸಂವಿಧಾನ ಅಡಿಪಾಯವಾಗಿದೆಯೆಂದರು.





ಚಿಕ್ಕನಾಯಕನಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಮತ್ತು ಹುಳಿಯಾರ್ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಕಛೇರಿ ಆವರಣದಲ್ಲಿ ಮಾಜಿ ಶಾಸಕ*ರಾದ ಕೆ ಎಸ್ ಕಿರಣ್ ಕುಮಾರ್ ರವರ ಮಾರ್ಗದರ್ಶನ ದಲ್ಲಿ 77ನೇ ಗಣರಾಜ್ಯೋತ್ಸವ ವನ್ನು ಸ್ವಾತಂತ್ರ್ಯ ಹೋರಾಟ ಗಾರರ ತ್ಯಾಗ ಬಲಿದಾನ ಸ್ಮರಣೆ ಮತ್ತು ಸಂವಿಧಾನ ಶಿಲ್ಪಿ ಡಾ ಬಿ ಆರ್ ಅಂಬೇಡ್ಕರ್ ರವರ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಘೋಷ ವಾಕ್ಯ ಚಿಂತನೆ ಚರ್ಚೆ ಯೊಂದಿಗೆ ಸಂವಿಧಾನ ಜಾರಿ ದಿನಾಚರಣೆಯ ನ್ನು ಅರ್ಥ



77ನೇ ಗಣರಾಜ್ಯೋತ್ಸವದ ಅಂಗವಾಗಿ ಸೋಮವಾರ ತುಮಕೂರಿನ ಅಮಾನಿಕೆರೆ ಅಂಗಳದಲ್ಲಿ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಧ್ವಜವಂದನೆ ಸ್ವೀಕರಿಸಿದರು. ಶಾಸಕ ಜಿ.ಬಿ.ಜ್ಯೋತಿಗಣೇಶ್, ಟೂಡಾ ಆಯುಕ್ತ ಉಮೇಶ್‌ಚಂದ್ರ, ಪ್ರಜಾಪ್ರಗತಿ ಸಂಪಾದಕ ಡಾ.ಎಸ್.ನಾಗಣ್ಣ, ತಹಶೀಲ್ದಾರ್ ರಾಜೇಶ್ವರಿ, ನಿವೃತ್ತ ಸೈನಿಕರು ಹಾಜರಿದ್ದರು.

# ಕಾರು–ಲಾರಿ ಡಿಕ್ಕಿ: ಮೂವರು ಸ್ಥಳದಲ್ಲೇ ಸಾವು

ತುಮಕೂರು: ಪ್ರವಾಸ ಮುಗಿಸಿಕೊಂಡು ಬರುತ್ತಿದ್ದ ಕಾರು ಲಾರಿಯ ಹಿಂಬದಿಗೆ ಅಪ್ಪಳಿಸಿದ ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ನೆಲಹಾಳ್ ಬಳಿ ರಾಷ್ಟ್ರೀಯ ಹೆದ್ದಾರಿ–48 ರಲ್ಲಿಂದು ಮುಂಜಾನೆ ನಡೆದಿದೆ.

ಮೃತಪಟ್ಟವರನ್ನು ಉತ್ತರ ಪ್ರದೇಶ ಮೂಲದ ಬೆಂಗಳೂರಿನಲ್ಲಿ ವಾಸವಾಗಿದ್ದ ಅನಿಕೇತ್ (42), ಅಭೀರ್ (44) ಹಾಗೂ ಆಂಧ್ರ ಮೂಲದ ಸನ್ಮೋಕ್ತಿ (35) ಎಂದು ಗುರುತಿಸಲಾಗಿದೆ. ಇವರೊಂದಿಗೆ ಕಾರಿನಲ್ಲಿದ್ದ ಉಳಿದ ನಾಲ್ವರು ತೀವ್ರವಾಗಿ ಗಾಯಗೊಂಡಿದ್ದು, ಗಾಯಾಳುಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಳೆದ ಮೂರು ದಿನಗಳಿಂದ ಸಾಲು ಸಾಲು ರಜೆ ಇದ್ದ ಕಾರಣ ಬೆಂಗಳೂರಿನ ಖಾಸಗಿ ಕಂಪೆನಿಯೊಂದರ ಉದ್ಯೋಗಿಗಳಾಗಿರುವ ಇವರುಗಳು ಗೋಕರ್ಣ, ಮುರುಡೇಶ್ವರ ಹಾಗೂ ಉಡುಪಿ ಕಡೆಗೆ ಪ್ರವಾಸಕ್ಕೆ ತೆರಳಿದ್ದರು. ಪ್ರವಾಸ ಮುಗಿಸಿಕೊಂಡು ಬೆಂಗಳೂರಿಗೆ ವಾಪಸ್ಸಾಗುತ್ತಿದ್ದಾಗ ಮಾರ್ಗಮಧ್ಯೆ ಕೋರಾ ಪೊಲೀಸ್ ಠಾಣೆ ಸರಹದ್ದಿನ ನೆಲಹಾಳ್ ಬಳಿ ರಾಷ್ಟ್ರೀಯ ಹೆದ್ದಾರಿ–48 ರಲ್ಲಿ ಮುಂಜಾನೆ ಚಲಿಸುತ್ತಿದ್ದ ಲಾರಿಯ ಹಿಂಬದಿ ಕಾರು ಡಿಕ್ಕಿ ಹೊಡೆದಿದ್ದರಿಂದ ಕಾರಿನಲ್ಲಿ 7 ಜನರ ಪೈಕಿ ಮೂವರು ಸ್ಥಳದ್ದೇ ಅಸುನೀಗಿದ್ದಾರೆ. ಉಳಿದ ನಾಲ್ವರ ಸ್ಥಿತಿ ಗಂಭೀರವಾಗಿದೆ.



ಕಾರು ಲಾರಿಯ ಹಿಂಬದಿಗೆ ವೇಗವಾಗಿ ಬಂದು ಡಿಕ್ಕಿ ಹೊಡೆದಿದ್ದರಿಂದ ಅರ್ಧಭಾಗ ಒಳನುಗಿ ನಜ್ಜುಗುಜ್ಜಾಗಿದೆ. ಲಾರಿಯ ಹಿಂಬದಿ ಕಾರು ಸಿಲುಕಿಕೊಂಡಿತ್ತು. ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಈ ಅಪಘಾತದಿಂದಾಗಿ ಸಿರಾ ಕಡೆಯಿಂದ ತುಮಕೂರು, ಬೆಂಗಳೂರು ಕಡೆಗೆ ತೆರಳು ವಾಹನಗಳ ಸಂಚಾರ ಕೆಲ ಹೊತ್ತು ಅಸ್ತವ್ಯಸ್ತಗೊಂಡಿತ್ತು.

ಘಟನೆಯ ಸುದ್ದಿ ತಿಳಿದ ಕೂಡಲೇ ಕೋರಾ ಪೊಲೀಸರು ಸ್ಥಳಕ್ಕೆ ಧಾವಿಸಿ ಅಪಘಾತದಿಂದಾಗಿ ಲಾರಿಯ ಹಿಂಬದಿಗೆ ಸಿಲುಕ್ಕಿ ಕಾರನ್ನು ಬೇರ್ಪಡಿಸಿ ಅದರೊಳಗಿದ್ದ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವಲ್ಲಿ ಶ್ರಮಿಸಿದರು. ಜತೆಗೆ ಕಾರಿನಲ್ಲಿ ಸಿಲುಕಿಕೊಂಡಿದ್ದ ಶವಗಳನ್ನು ಹೊರ ತೆಗೆದು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನಿಸಿದರು. ನಂತರ ಅಸ್ತವ್ಯಸ್ತಗೊಂಡಿದ್ದ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಈ ಸಂಬಂಧ ಕೋರಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಘಟನೆಯ ಸುದ್ದಿ ತಿಳಿದ ಕೂಡಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಬೆಳಗಾವಿಯ 400 ಕೋಟಿ ದರೋಡೆ ಪ್ರಕರಣ: ತುಂಬಾ ಗೊಂದಲಗಳಿವೆ ಎಂದ ಗೃಹ ಸಚಿವ ಪರಮೇಶ್ವರ



ತುಮಕೂರು: 'ಬೆಳಗಾವಿಯ ಬಳಿಯ ಚೋರ್ಲಾ ಘಾಟ್ ಬಳಿ ನಡೆದ 400 ಕೋಟಿ ಮಹಾ ದರೋಡೆ ಪ್ರಕರಣದ ಕುರಿತು ಮಹಾರಾಷ್ಟ್ರ ಸರ್ಕಾರ ಎಸ್‌ಐಟಿ ರಚಿಸಿದೆ. ಈವರೆಗೆ ಸ್ವಲ್ಪ ಮಾಹಿತಿ ಸಿಕ್ಕಿದ್ದು ಅದರಲ್ಲೂ ತುಂಬಾ ಗೊಂದಲಗಳಿವೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಸ್‌ಐಟಿ ವರದಿ ಸಲ್ಲಿಸುವ ತನಕ ಏನೂ ಹೇಳಲು ಆಗುವುದಿಲ್ಲ' ಎಂದು ಹೇಳಿದರು.

ಇದುವರೆಗೆ ಬಂದ ಮಾಹಿತಿ ಪ್ರಕಾರ ಈ ಪ್ರಕರಣದಲ್ಲಿ ಪೊಲೀಸರು ಭಾಗಿಯಾಗಿದ್ದು ಕಂಡುಬಂದಿಲ್ಲ. ತನಿಖೆಯಲ್ಲಿ ಏನು ಬರುತ್ತದೆ ಎಂಬುವುದು ನೋಡಬೇಕು' ಎಂ ದರು.

ದೂರು ಅಸ್ಪಷ್ಟ: '400 ಕೋಟಿ ಲೂಟಿ ಮಾಡಲಾಗಿದೆ ಎಂಬ ದೂರು ಅಸ್ಪಷ್ಟವಾಗಿದೆ. ನಿರ್ದಿಷ್ಟ ಸ್ಥಳ ಉಲ್ಲೇಖಿಸದ ಕಾರಣ ವದಂತಿಯಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬೆಳಗಾವಿಯಲ್ಲಿ ಪ್ರತಿಕ್ರಿಯಿಸಿದ್ದಾರೆ.ಘಾಟ್ ವಿಭಾಗವು ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ವ್ಯಾಪ್ತಿಯಲ್ಲಿ ಹರಡಿದೆ. ಮಹಾರಾಷ್ಟ್ರ ಪೊಲೀಸರು ಮಾಹಿತಿ ಹಂಚಿಕೊಂಡರೆ, ನಮ್ಮ ಪೊಲೀಸರು ತನಿಖೆ ಮುಂದುವರಿಸುವರು' ಎಂದರು.

ಬಿಜೆಪಿಯವರ ಸುಳ್ಳು: 'ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಜನರ ದಾರಿ ತಪ್ಪಿಸುತ್ತಿದ್ದಾರೆ. ಅಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹಣ ಸಾಗಿಸುತ್ತಿದ್ದರೆನ್ನಲಾಗಿದೆ' ಎಂದು ಸಚಿವ ಎನ್.ಎಸ್.ಬೋಸರಾಜು ಟೀಕಿಸಿದರು.

'ಟ್ರಕ್ ಸಹಿತ ಹೈಜಾಕ್ ಆಗಿರುವ □ 400 ಕೋಟಿ ಕಾಂಗ್ರೆಸ್ಸಿನದ್ದು' ಎಂಬ ಮಹಾರಾಷ್ಟ್ರ ಮುಖ್ಯಮಂತ್ರಿ ಅವರ ಹೇಳಿಕೆಗೆ ಹೀಗೆ ಪ್ರತಿಕ್ರಿಯಿಸಿದರು.

ಮಡಿಕೇರಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಾಹನ ಹೈಜಾಕ್ ಮಾಡಿದವರು, ದೂರು ನೀಡಿದ ಎಲ್ಲ ಮಹಾರಾಷ್ಟ್ರದವರೇ. ತನಿಖೆ ನಡೆಯುತ್ತಿದ್ದು ಕಾನೂನು ಕ್ರಮವಾಗಲಿದೆ' ಎಂದರು.

## ಪ್ರತಿಯೊಬ್ಬರೂ ಸಹ ಸಂವಿಧಾನದ ಆಶಯಗಳನ್ನು ಅರಿತು ಪಾಲಿಸಬೇಕು: ಶಾಸಕ ಕೆ.ಎನ್ ರಾಜಣ್ಣ



ಮಧುಗಿರಿ: ದೇಶವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಸ್ಥಾಪಿಸುವುದು ಸಂವಿಧಾನದ ಮೂಲ ಉದ್ದೇಶವೆಂದು ಶಾಸಕ ಕೆ.ಎನ್ ರಾಜಣ್ಣ ತಿಳಿಸಿದರು.ಪಟ್ಟಣದ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಸಮಿತಿ ತಾಲ್ಲೂಕು ಆಡಳಿತ ಹಾಗೂ ಪುರಸಭೆ ವತಿಯಿಂದ ಆಯೋಜಿಸಲಾಗಿದ್ದ "77ನೇ ಗಣರಾಜ್ಯೋತ್ಸವ" ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯವನ್ನು ತರುವ ನಿಟ್ಟಿನಲ್ಲಿ ಶ್ರಮಿಸಿದವರಲ್ಲಿ ಪ್ರಮುಖರು ಪಡಿಂತ್‌ಜವಹರ್‌ಲಾಲ್ ನೆಹರೂ, ಸರ್ಧಾರ್‌ವಲ್ಲಭಾಯಿ ಪಟೇಲ್ ಡಾ. ಬಿ.ಆರ್ ಅಂಬೇಡ್ಕರ್‌ರವರು ಬಾಬಾಸಾಹೇಬರು ಆ ದಿನಗಳಲ್ಲಿ ಅಪಾರ ಅವಮಾನ ಕಷ್ಟಗಳನ್ನು ಎದುರಿಸಿ ಕಷ್ಟಗಳನ್ನೇ ಸವಾಲಾಗಿ ಸ್ವೀಕರಿಸಿ ಶಿಕ್ಷಣಪಡೆದು ಪ್ರಪಂಚದಲ್ಲೇ ಹೆಚ್ಚು ಡಾಕ್ಟರೇಟ್ ಪಡೆದು ನಮಗೆಲ್ಲರಿಗೂ ವಿಶ್ವಕ್ಕೆ ಮಾದರಿಯಾಗಿರುವ ಸವಿಂಧಾನ ರಚಿಸಿಕೊಟ್ಟ ಬಾಬಾಸಾಹೇಬರ ಕೊಡುಗೆ ದೇಶಕ್ಕೆ ಅಪಾರವಾಗಿದೆ ಎಂದರು.

ನಮ್ಮ ಸಮಾಜಕ್ಕೆ ಮಹನೀಯರು ನೀಡಿರುವಂತಹ ಕೊಡುಗೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ತಾವೆಲ್ಲರೂ ಮಕ್ಕಳಿಗೆ ಉತ್ತಮ ವಿಧ್ಯಾಭ್ಯಾಸವನ್ನು ನೀಡುವುದರ ಜೊತೆಗೆ ಮಕ್ಕಳಿಗೆ ಆಸ್ತಿ ಮಾಡದೇ ಮಕ್ಕಳನ್ನೇ ಸಮಾಜದ ಆಸ್ತಿಯನ್ನಾಗಿಸುವಲ್ಲಿ ಪೋಷಕರು ಶ್ರಮವಹಿಸಬೇಕು, ಇಂದು ಸಮಾಜದಲ್ಲಿ ಉತ್ತಮ ಸ್ಥಾನಮಾನ ಕಲ್ಪಿಸುವ ಶಕ್ತಿ ಶಿಕ್ಷಣಕ್ಕಿದ್ದು ಮಕ್ಕಳು ಶಿಕ್ಷಣವಂತರಾಗಿ ನಿಮ್ಮನ್ನು ನೀವು ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಗಳಿಸಬೇಕೆಂದರು.

ಪೂರ್ವಜರು ನಮಗೆ ನೀಡಿರುವ ಆಸ್ತಿಯನ್ನು ಸಂರಕ್ಷಿಸಬೇಕು ದೇಶ ನಾಡು ನುಡಿಯ ಬಗ್ಗೆ ವಿಶೇಷಕಾಳಜಿಯನ್ನು ಹೊಂದಬೇಕು ಎಂದರುರಾಷ್ಟ್ರಕವಿ ಕುವೆಂಪುರವರು ಬಣ್ಣಿಸಿದ ಸರ್ವಜನಾಂಗದ ಶಾಂತಿ ತೋಟ ಎನ್ನುವ ನುಡಿ ಸಕಾರಗೊಂಡಾಗ ಮಾತ್ರ ನಾವು ನೀವೆಲ್ಲರೂ ಸಮಾಜದಲ್ಲಿ ನೆಮ್ಮದಿಯ ಜೀವನ ನೆಡೆಸಲು ಸಾಧ್ಯವಾಗುತ್ತದೆ ಎಂದು ಈ ಸಂಧರ್ಭದಲ್ಲಿ ನುಡಿದರು.ಪ್ರತಿಯೊಬ್ಬರೂ ಸಹ ಸಂವಿಧಾನದ ಆಶಯಗಳನ್ನು ಅರಿತು ಪಾಲಿಸುವಂತೆ ಈ ಸಂಧರ್ಭದಲ್ಲಿ ತಿಳಿಸಿದರು.

ಧ್ವಜಾರೋಹಣ ಕಾರ್ಯಕ್ರಮ ಕ್ರಮವನ್ನು ಉಪವಿಭಗಾಧಿಕಾರಿ ಗೊಟೂರು ಶಿವಪ್ಪ ನವರು ನೆರವೇರಿಸಿ ಮಾತನಾಡಿದರು ಜನವರಿ 26 ಭಾರತಕ್ಕೆ ಅವಿಸ್ಮರಣೆಯ ದಿನ ಇಂದು ನಾವು ಸ್ಮರಿಸಬೇಕಾಗಿರುವುದು ಎಂದರೆ ಶತಮಾನಗಳ ಕಾಲ ದಾಸ್ಯದಲ್ಲಿದ್ದ ನಮ್ಮ ದೇಶಕ್ಕೆ ಸ್ವತಂತ್ರ ತಂದುಕೊಟ್ಟ ಹುತಾತ್ಮರ ಹಾಗೂ ನಾಯಕರಿಗೆ ನಾವು ಮೊದಲು ಗೌರವ ನಮನಗಳನ್ನು ಸಮರ್ಪಿಸುವುದು ಹಾಗೆ ಸಂವಿಧಾನ ರಚನಕಾರರಾದ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮತ್ತು ಅವರ ಸ್ನೇಹಿತರಿಗೆ ಗೌರವ ಸಲ್ಲಿಸುವುದರ ಮೂಲಕ ಸಂವಿಧಾನವನ್ನು ಓದಿ ಕೇಳಿ ತಿಳಿದು ಸಂವಿಧಾನದ ನಿರೀಕ್ಷೆಗಳನ್ನು ಹಾಗೂ ಆದರ್ಶಗಳದ ಸ್ವಾತಂತ್ರ್ಯ ಸಮಾನತೆ ಸಹೋದರತೆ ಜಾತ್ಯತೀತತೆ ವ್ಯಕ್ತಿ ಗೌರವ ಮತ್ತು ರಾಷ್ಟ್ರದ ಭಾವೈಕ್ಯತೆಯನ್ನು ಅರ್ಥ ಮಾಡಿಕೊಂಡು ಬಲಪಡಿಸುವ ಸಂಕಲ್ಪ ನಾವೆಲ್ಲರೂ ಕೂಡ ಮಾಡಬೇಕಾಗಿದೆ.ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಬಂಕಿಮ ಚಂದ್ರ ಚಟುಪಾಧ್ಯಾಯರು ರಚಿಸಿರುವ ಒಂದೇ ಮಾತರಂ ಗೀತೆಗೆ 150 ವರ್ಷಗಳು ಕಳೆದಿದ್ದು ಜನರನ್ನು ಒಂದುಗೂಡಿಸುವ ಮಂತ್ರ ಇದಾಗಿದ್ದು ಅಭಿವೃದ್ಧಿಯೊಂದಿಗೆ ಸ್ವಾವಲಂಬಿ ಮತ್ತು ಆತ್ಮಾ ನಿರ್ಭರ ಭಾರತವನ್ನು ನಿರ್ಮಾಣ ಮಾಡುವ ಗುರಿಯನ್ನು ಭಾರತ ಹೊಂದಿದೆ ಎಂದರು.

ನಮ್ಮ ದೇಶವು ಶತಮಾನಗಳ ಸಾಮ್ರಾಜ್ಯಶಾಹಿ ಪ್ರಜಾಪ್ರಭುತ್ವದ ವಿರುದ್ಧ ಸತ್ಯ ಹಿಂಸೆ ಮತ್ತು ಸತ್ಯ ಗ್ರಹಗಳ ಮೂಲಕ ಹೋರಾಟ ನಡೆಸಿ ಬ್ರಿಟಿಷರನ್ನು ಮಣಿಸಿ 1947ರಲ್ಲಿ ಸ್ವಾತಂತ್ರ್ಯ ಗಳಿಸಿರುವುದು ಇತಿಹಾಸ 1950ರ ಜನವರಿ 26ರಂದು ದೇಶದ ಆಡಳಿತ ನಿರ್ವಹಣೆ ಹಾಗೂ ಮುನ್ನಡೆಗಾಗಿ ನಮ್ಮದೇ ಸಂವಿಧಾನವನ್ನು ಅತ್ಮಾರ್ಪಿತ ಮಾಡಿಕೊಂಡ ಮಹತ್ವ ದಿನ ಇದಾಗಿದೆ. ಸರ್ವರಿಗೂ ಸಮಪಾಲು ಸರ್ವರಿಗೂ ಸಮ ಬಾಳು ಲಭ್ಯವಾಗುವ ಸಮ ಸಮಾಜದ ನಿರ್ಮಾಣದ ಆಶಯವನ್ನು ನಮ್ಮ ಸಂವಿಧಾನ ಹೊಂದಿದೆ.ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ನಮ್ಮ ದೇಶದಲ್ಲಿ ಭಾವೈಕ್ಯತೆ ಸಹಬಾಳ್ವೆ ಮತ್ತು ಸಾಮರ್ಥ್ಯದೊಂದಿಗೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳನ್ನು ಕಲ್ಪಿಸಿಕೊಟ್ಟು ದೇಶದ ಮುನ್ನಡೆಗೆ ದಾರಿದೀಪವಾಗಿರುವ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸ್ನೇಹಿತರನ್ನು ಕೃತಜ್ಞ ಭಾವದಿಂದ ಸ್ಮರಿಸೋಣ ಎಂದರು. ನಮ್ಮ ದೇಶದಲ್ಲಿ ಶತಶತಮಾನಗಳಿಂದ ಅಸಮಾನತೆ ತಾರತಮ್ಯ ಮತ್ತು ತುಳಿತಕ್ಕೊಳಗಾಗಿದ್ದ ದುರ್ಬಲ ವರ್ಗಗಳ ಜನತೆಯನ್ನು ಸಶಕ್ತಗೊಳಿಸಿ ಮುಖ್ಯ ವಾಹಿನಿಗೆ ತರಲು ಸಮಾನತೆಯ ನೆರೆಯಲ್ಲಿ ಸಂವಿಧಾನವು ವಿಶೇಷ ಅವಕಾಶಗಳನ್ನು ಕಲ್ಪಿಸಿದೆ ಸ್ವಾತಂತ್ರ್ಯ ಸಮಾನತೆಯ ಸಹೋದರತೆ ಬೆಕ್ಕಿಗೌರವ ರಾಷ್ಟ್ರೀಯ ಐಕ್ಯತೆ ಮತ್ತು ಸಾಮಾಜಿಕ ನ್ಯಾಯವನ್ನು ಸಂವಿಧಾನದಲ್ಲಿ ಅಳವಡಿಸಿರುವ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಮ್ಮ ಸಂವಿಧಾನದ ಆತ್ಮ ಸಾಕ್ಷಿಯಾಗಿದ್ದಾರೆ ಎಂದು ತಿಳಿಸಿದರು.

ಭಾರತ ಸಂವಿಧಾನದ ಪ್ರಸ್ತಾವನೆಯನ್ನು ಅದರ ಆತ್ಮ ಎಂದು ಪ್ರಸ್ತಾವನೆಯೂ ಭಾರತದ ಪ್ರತಿಯೊಬ್ಬ ಪ್ರಜೆಯ ಕಲ್ಯಾಣ ಮತ್ತು ರಾಷ್ಟ್ರದ ಏಳಿಗೆಯನ್ನು ಬಯಸುತ್ತದೆ ಭಾರತ ಜನತೆಯಾದ ನಾವು ಭಾರತವನ್ನು ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಜನತಂತ್ರ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ ಎಲ್ಲಾ ನಾಗರಿಕರಿಗೆ, ಸಾಮಾಜಿಕ ಆರ್ಥಿಕ, ರಾಜಕೀಯ ನ್ಯಾಯ, ಅಭಿವ್ಯಕ್ತಿ, ನಂಬಿಕೆ, ಧರ್ಮ ಶ್ರದ್ಧೆ, ಮತ್ತು ಉಪಾಸನೆಯ ಸ್ವಾತಂತ್ರ್ಯ ಸ್ಥಾನಮಾನ, ಅವಕಾಶಗಳ ಸಮತೆ ದೊರೆಯುವಂತೆ ಮಾಡುವುದು, ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಭ್ರಾತೃತ್ವ ಭಾವ ಮೂಡಿಸುವ ದೃಢಸಂಕಲ್ಪ ಮಾಡಿ ಅರ್ಪಿಸಿಕೊಂಡಿದ್ದೇವೆ. ನಮ್ಮ ಸಂವಿಧಾನದ ದೂರ ದೃಷ್ಟಿಯ ಜನಪರ ಮತ್ತು ಸಮಾನತೆಯ ಕಾಳಜಿಯು ಸುಭದ್ರ ಮತ್ತು ಸಹಬಾಳ್ವೆಯ ರಾಷ್ಟ್ರ ನಿರ್ಮಾಣಕ್ಕೆ ಆಧಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಿ ವೈ ಎಸ್ ಪಿ ಮಂಜುನಾಥ್, ತಹಶೀಲ್ದಾರ್ ಶ್ರೀನಿವಾಸ್ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಲಕ್ಷ್ಮಣ್, ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರಾದ ಮಾಧವ ರೆಡ್ಡಿ, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತರಾಯಪ್ಪ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಚೌಡಪ್ಪ, ಈಶ್ವರಯ್ಯ, ಮಾಜಿ ಪುರಸಭೆ ಅಧ್ಯಕ್ಷರಾದ ಲಾಲಾಪೇಟೆ ಮಂಜುನಾಥ್ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ರಂಗಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲಯ್ಯ, ಡಿಎಸ್‌ಎಸ್ ಸಂಚಾಲಕ ದೊಡ್ಡೇರಿ ಕಣಿಮಯ್ಯ, ಕೆಪಿಸಿಸಿ ಸದಸ್ಯ ಸಿದ್ದಾಪುರ ರಂಗಶಾಮಯ್ಯ ತಾಲ್ಲೂಕು ಕಸಾಪ ಅಧ್ಯಕ್ಷರಾದ ಸಹನಾ ನಾಗೇಶ್ ಹಾಗೂ ಇನ್ನಿತರರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕಾಂಗ್ರೆಸ್ ಕಚೇರಿಯಲ್ಲಿ ಭಾರತದ ಸಂವಿಧಾನ ಸಮರ್ಪಣಾ ದಿನ



ತುಮಕೂರು:ನಗರದಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾರತದ ಸಂವಿಧಾನ ಸಮರ್ಪಣಾ ದಿನವಾದ 73ನೇ ಗಣರಾಜ್ಯೋತ್ಸವ ದಿನವನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಇಕ್ಬಾಲ್ ಅಹ ಮದ್ ಅವರಅಧ್ಯಕ್ಷತೆಯಲ್ಲಿರಾಷ್ಟ್ರಪಿತ ಮಹಾತ್ಮಗಾಂಧಿ ಮತ್ತು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಸಾಂವಿಧಾನ ಪೀಠಿಕೆಯನ್ನು ಬೋಧಿಸಿದ ಜಿಲ್ಲಾ ಕಾಂಗ್ರೆಸ್ ಮಾಜಿಅಧ್ಯಕ್ಷಆರ್.ರಾಮಕೃಷ್ಣ ಮಾತನಾಡಿ,ಸ್ವಾತಂತ್ರ ನಂತರ ಭಾಷೆ, ಸಂಸ್ಕೃತಿ ಹೆಸರಿನಲ್ಲಿ ಹರಿದು ಹಂಚಿ ಹೋಗಿದ್ದ ಭಾರತವನ್ನು ಭಾರತದ ಸಂವಿಧಾನದಅಡಿಯಲ್ಲಿತಂದು, ಗಣತಂತ್ರ ದಿನವನ್ನಾಗಿ ಘೋಷಿಸಿ, ಆ ಮೂಲಕ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಅವರಅಧ್ಯಕ್ಷತೆಯಲ್ಲಿರಚಿತವಾದ ಭಾರತದ ಸಂವಿಧಾನವನ್ನುಒಪ್ಪಿಕೊಂಡು, ಅದನ್ನು ನಮಗೆ ನಾವೇ ಅರ್ಪಿಸಿಕೊಂಡ ದಿನವಾಗಿದೆ. ನಮ್ಮ ಇಂದಿನ ಪೀಳಿಗೆಗೆ ಸ್ವಾತಂತ್ರ ಹೋರಾಟ, ಅದರ ಹಿಂದಿನ ಕಷ್ಟಟಗಳು,ಹಾಗೂ ಸಂವಿಧಾನರಚನೆಗೆ ಹಿಂದಿನ ಕಷ್ಟಗಳ ಬಗ್ಗೆ ಅರಿವಿಲ್ಲ.ಇದರ ಬಗ್ಗೆ ತಿಳುವಳಿಕೆ ನೀಡುವ ಕೆಲಸ ಆಗಬೇಕಾಗಿದೆ.ಆ ಮೂಲಕ ಬಿಜೆಪಿ ಮತ್ತುಅದರ ಅಂಗಸಂಸ್ಥೆಗಳ ದೇಶ ಹೊಡೆಯುವ ಹುನ್ನಾರಗಳನ್ನು ಬಯಲಿಗೆಳೆಯ ಬೇಕಿದೆ ಎಂದರು.

ಮುಖಂಡರಾದ ಷಣ್ಮುಖಪ್ಪ ಮಾತನಾಡಿ,ಇಂದು ಪ್ರಜಾಪ್ರಭುತ್ವಆಧಾರ ಸ್ತಂಭವಾದ ಸಂವಿಧಾನವನ್ನು ನಮಗೆ ನಾವೇ ಜಾರಿ ಮಾಡಿಕೊಂಡ ದಿನ.ಸಂವಿಧಾನಅಪಾಯವನ್ನುಎದುರಿಸುತ್ತಿದ್ದು, ಇದನ್ನು ಸಂರಕ್ಷಿಸುವ ನಿಟ್ಟಿನಲ್ಲಿ ನಾವೆಲ್ಲರೂಒಗ್ಗೂಡಿ ಕೆಲಸ ಮಾಡಬೇಕಾಗಿದೆ. ಗಾಂಧೀಯನ್ನುದೇಶದಜನರ ಮನಸ್ಸಿನಿಂದ ಹೊರ ಹಾಕಿ, ಗೂಡ್ಸೆಕೂರಿಸಲು ಹೊರಟಿರುವ ಬಿಜೆಪಿಯ ಷಡ್ಯಂತ್ರದ ವಿರುದ್ದದೇಶದಜನರು ಎಚ್ಚೆತ್ತುಕೊಳ್ಳಬೇಕಾಗಿದೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಇಕ್ಬಾಲ್‌ಅಹಮದ್ ಮಾತನಾಡಿ,ಎರಡು ವರೆ ವರ್ಷಗಳಿಗೂ ಹೆಚ್ಚು ಕಾಲ ಪ್ರಪಂಚದ ವಿವಿಧ ರಾಷ್ಟ್ರಗಳ ಸಂವಿಧಾನವನ್ನುಅಧ್ಯಯನ ನಡೆಸಿ, ಅಲ್ಲಿನ ಒಳ್ಳೆಯ ಅಂಶಗಳನ್ನು ತಂದು, ಬಹುಭಾಷೆ, ಸಂಸ್ಕೃತಿ, ಜಾತಿ, ಧರ್ಮಗಳಿರುವ ಭಾರತಕ್ಕೆ ಹೊಂದುವಂತಹ ಸಂವಿಧಾನವನ್ನು ರಚಿಸಿಕೊಟ್ಟ ಅಂಬೇಡ್ಕರ್, ಮತ್ತುಅದಕ್ಕಾಗಿ ಸಹಕರಿಸಿದ ಎಲ್ಲರೂ ಪ್ರಾಥ ಸ್ಮರಣೆಯರು.ಹಲವರತ್ಯಾಗ, ಬಲಿಧಾನದಿಂದ ಬಂದ ಸ್ವಾತಂತ್ರವನ್ನು ಉಳಿಸಿಕೊಂಡು, ಭಾರತವನ್ನುಅಭಿವೃದ್ಧಿ ಶೀಲ ರಾಷ್ಟ್ರವನ್ನಾಗಿಸುವ ನಿಟ್ಟಿನಲ್ಲಿ ಸಂವಿಧಾನದ ಪಾತ್ರ ಮಹತ್ವದ್ದಾಗಿದೆ.ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಸೂತ್ರದಅಡಿಯಲ್ಲಿ ಭಾರತದಏಕತೆ ಮತ್ತು ಸಮಗ್ರತೆಯನ್ನುಕಾಪಾಡಲು ನಮ್ಮ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ.ಆದರೆ ಮನುಕುಲ ವಿರೋಧಿಯಾಗಿ,ಸಂವಿಧಾನ ಆಶಯಗಳನ್ನು ಧಿಕ್ಕರಿಸುವಜನರಿಗೆ ಸರಿಯಾದಉತ್ತರವನ್ನು ಭಾರತೀಯರು ನೀಡಬೇಕಾಗಿದೆ.ಸಂವಿಧಾನದರಕ್ಷಣೆಯಲ್ಲಿ, ನಮ್ಮರಕ್ಷಣೆಯೂಅಡಗಿರುವುದರಿಂದ, ಸಂವಿಧಾನರಕ್ಷಣೆಗೆ ನಾವೆಲ್ಲರೂ ಪಣತೊಡಬೇಕಾಗಿದೆಎಂದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಉಪಾಧ್ಯಕ್ಷರಾದ ಮುರುಳೀಧರ ಹಾಲಪ್ಪ, ಹೆಚ್.ಸಿ.ಹನುಮಂತಯ್ಯ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಫಯಾಜ್,ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ದೇಶದ ಅಭಿವೃದ್ಧಿಯ ವೇಗಕ್ಕೆ ಯುವಕರು ವರವಾಗಿದ್ದಾರೆ

ದಾಬಸ್‌ಪೇಟೆ: ಪ್ರಸ್ತುತ ದಿನಗಳಲ್ಲಿ ಭಾರತದ ಸಂಸ್ಕೃತಿಯ ಆಳವಾದ ಅಧ್ಯಯನದ ಅವಶ್ಯಕತೆಯಿದ್ದು, ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿ ಚಿಕ್ಕ ಚಿಕ್ಕ ಕುಟುಂಬಗಳು ಹೆಚ್ಚಾಗಿದ್ದು ಇದು ಮಕ್ಕಳ ಸಂಸ್ಕೃತಿ ಹಾಗೂ ಸಂಸ್ಕಾರದ ಮೇಲೆ ಪರಿಣಾಮ ಬೀರುತ್ತಿವೆ ಎಂದು ಪ್ರಜಾಪ್ರಗತಿ ಪತ್ರಿಕೆಯ ಸಂಪಾದಕ ನಾಗಣ್ಣ ತಿಳಿಸಿದರು.

ಪಟ್ಟಣದ ವಿದ್ಯಾಸ್ಫೂರ್ತಿ ಇಂಟರ್‌ನ್ಯಾಷನಲ್ ಅಕಾಡೆಮಿ ಶಾಲೆಯಲ್ಲಿ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.1947ರ ಆಗಸ್ಟ್ 15 ರಂದು ದೇಶವು ಸ್ವಾತಂತ್ರ್ಯ ಗಳಿಸಿತು. ನಂತರ ಜನವರಿ 26, 1950 ರಂದು ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಅಂಗೀಕರಿಸಲಾಯಿತು ಈ ದಿನವನ್ನು ಗಣರಾಜ್ಯ ದಿನವೆಂದು ಆಚರಿಸಲಾಗುತ್ತಿದೆ. ಸಂವಿಧಾನದ ಆಶಯದಂತೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಸಂದೇಶವನ್ನು ಬಲಪಡಿಸಿ ಸರ್ವರಿಗೂ ಸಂವಿಧಾನದ ಆಶಯಗಳು ಲಬಿಸುವಂತೆ ನೋಡಿಕೊಳ್ಳಬೇಕಿದೆ. ಭಾರತದಲ್ಲಿ ಶೇಕಡಾ 50ಕ್ಕಿಂತ ಹೆಚ್ಚು ಯುವಕರು ಇದ್ದು ಇದೇ ನಮ್ಮ ದೇಶದ ಮಹಾನ್ ಆಸ್ತಿಯಾಗಿದ್ದು, ದೇಶದ ಅಭಿವೃದ್ಧಿಯ ವೇಗಕ್ಕೆ ವರವಾಗಿದೆ, ಈ ಹಿನ್ನೆಲೆ ಮಕ್ಕಳು ಹೆಚ್ಚೆಚ್ಚು ಮೊಬೈಲ್ ಬಳಕೆ ಮೇಲೆ ಗಮನ ಕೇಂದ್ರೀಕರಿಸದೆ ಅಧ್ಯಯನ, ಭಾಷೆಯ ಬಳಕೆ, ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.ಶಾಲೆಯ ಸಂಸ್ಥಾಪಕ ಹಾಗೂ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಉಮಾಶಂಕರ್ ಮಾತನಾಡಿ ಸಂವಿಧಾನದ ಆಶಯಗಳಾದ ಸಮಾನತೆ, ಸ್ವಾತಂತ್ರ್ಯ, ಸೌಹಾರ್ಧತೆ, ಜಾತ್ಯಾತೀತ, ಧರ್ಮಾತೀತ ತತ್ವಗಳಂತೆ ಸರ್ವರು ಸಮಾನತೆಯಿಂದ ಬದುಕುವಂತೆ ನೋಡಿಕೊಳ್ಳುವುದೇ ಗಣರಾಜ್ಯದ ಮಹತ್ವವಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಪ್ರತಿಯೊಬ್ಬರು ಶಿಕ್ಷಣ ಕಲಿತರೆ ಮಾತ್ರ ದೇಶ ಅಭಿವೃದ್ಧಿ ಸಾಧ್ಯವಾಗಿದೆ ಎಂದರು.ಇದೇ ವೇಳೆ ಶಾಲೆಯ ಮಕ್ಕಳು ಕರಾಟೆ ಶಕ್ತಿ ಪ್ರದರ್ಶನ ಹಾಗೂ ದೇಶಭಕ್ತಿ ಹಾಡಿಗೆ ನೃತ್ಯ ಮಾಡಿದರು, ಶಾಲೆಯಲ್ಲಿ ಈ ಸಾಲಿನಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದ ಸ್ಮೃತಿ ತಂಡಕ್ಕೆ ಟ್ರೋಫಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾಸ್ಫೂರ್ತಿ ಸಂಸ್ಥೆಯ ಆಡಳಿತಾಧಿಕಾರಿ ರಾಮಚಂದ್ರ, ವ್ಯವಸ್ಥಾಪಕ ಸೋಮಶೇಖರ್, ಪ್ರಾಂಶುಪಾಲ ಡಾ.ದಿಲೀಪ್ ಕುಮಾರ್, ಉಪಪ್ರಾಂಶುಪಾಲರಾದ ಅನಿಲ್ ಕುಮಾರ್, ವನಜಾಕ್ಷಿ, ಪ್ರಜಾಪ್ರಗತಿ ಸಂಸ್ಥೆಯ ತುಷಾರ್, ಶಿಕ್ಷಕ ವೃಂದ, ಮಕ್ಕಳು




## ವಿಶಾಲ ದೃಷ್ಟಿಕೋನ ಬೆಳಸಿಕೊಳ್ಳಲು ಎಂಜಿನಿಯರ್‌ಗಳಿಗೆ ಪ್ರಾಂಶುಪಾಲರ ಕರೆ



ತುಮಕೂರು: ನಗರದ ಕುಣಿಗಲ್ ರಸ್ತೆಯಲ್ಲಿರುವ ಶ್ರೀ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜಿನನಲ್ಲಿ 77ನೇ ಗಣರಾಜ್ಯೋತ್ಸವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕ್ಯಾಂಪಸ್ಸಿನ ಶಿಕ್ಷಣ ಶಿಲ್ಪಿ ಡಾ.ಎಚ್. ಎಂ.ಗಂಗಾಧರಯ್ಯ ವೃತ್ತದಲ್ಲಿ ಏರ್ಪಟ್ಟ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಎಂ.ಎಂ.ನಡಕಟ್ಟಿರವರು ರಾಷ್ಟ್ರಪಿತ ಮಹಾತ್ಮಗಾಂಧಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿದ ಪ್ರಾಂಶುಪಾಲರಾದ ಡಾ.ಎಂ.ಎಂ.ನಡಕಟ್ಟಿರವರು, ಗಣರಾಜ್ಯವಾಗಿ 77 ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ದೇಶದ ಪ್ರಗತಿಯ ಪ್ರಯಾಣದಲ್ಲಿ ನಿರ್ಣಾಯಕ ಹಂತದಲ್ಲಿ ನಿಂತಿದ್ದೇವೆ. ನಮ್ಮ ಮುಂದಿರುವ ಸವಾಲುಗಳು ಸಂಕೀರ್ಣವಾಗಿದ್ದು, ಇವು ಎಂಜಿನಿಯರ್‌ಗಳು ಮತ್ತು ತಂತ್ರಜ್ಞರಿಗೆ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವ ಅವಕಾಶಗಳನ್ನು ತೆರೆದಿಟ್ಟಿವೆ ಎಂದರು.

ಬೆಳೆಯುತ್ತಿರುವ ರಾಷ್ಟ್ರಕ್ಕೆ ವಿಶ್ವಾಸಾರ್ಹ ಶಕ್ತಿ ತುಂಬು ಕೆಲಸ, ಅಮೂಲ್ಯವಾದ ಜಲ ಸಂಪನ್ಮೂಲಗಳನ್ನು ಸಂರಕ್ಷಿಸುವುದು ಮತ್ತು ಅವುಗಳನ್ನು ಬುದ್ಧಿವಂತಿಕೆಯಿಂದ ನಿರ್ವಹಿಸುವುದು. ಸುಸ್ಥಿರ ಪರಿಹಾರಗಳೊಂದಿಗೆ ಪರಿಸರ ಮತ್ತು ಹವಾಮಾನ ಕಾಳಜಿಗಳಿಗೆ ಒತ್ತು ನೀಡುವುದು, ತಂತ್ರಜ್ಞಾನದ ಮೂಲಕ ಆರೋಗ್ಯ ರಕ್ಷಣೆಗೆ ಹೆಚ್ಚು ಆದ್ಯತೆ ಮತ್ತು ಕೈಗೆಟುಕುವಂತೆ ಮಾಡುವುದು ನಮ್ಮೆಲ್ಲರ ಪ್ರಮುಖ ಕರ್ತವ್ಯವಾಗಬೇಕೆಂದು ಅವರು ಕರೆ ನೀಡಿದರು.

ಆಧುನಿಕ ಕೃಷಿ ಸಾಧನ–ಪರಿಕರಗಳು ಮತ್ತು ತಂತ್ರಜ್ಞಾನ ಆಧಾರಿತ ನಿರ್ಧಾರಗಳೊಂದಿಗೆ ಕೃಷಿ ಪ್ರಗತಿಗೆ ಒತ್ತು ನೀಡುವುದು, ಶತ್ರುಗಳ ಬೆದರಿಕೆಗಳ ವಿರುದ್ಧ ವೇಗವಾಗಿ ಬೆಳೆಯುತ್ತಿರವ ಡಿಜಿಟಲ್ ಮೂಲಸೌಕರ್ಯವನ್ನು ಬಳಸಿಕೊಳ್ಳುವ ಜಾಣ್ಮೆ ನಮ್ಮೆಲರಲ್ಲೂ ಬರಬೇಕಿದೆ ಎಂದ ಪ್ರಾಂಶುಪಾಲರಾದ ಡಾ.ಎಂ.ಎಂ.ನಡಕಟ್ಟಿರವರು, ಸುರಕ್ಷಿತ, ಕಡಿಮೆ ದಟ್ಟಣೆ, ಹೆಚ್ಚು ಹಸಿರು ಮತ್ತು ಹೆಚ್ಚು ಅಂತರ್ಗತವಾಗಿರುವ ನಗರಗಳು. ನವೀನ, ವ್ಯಾಪಕವಾಗಿ ಪ್ರವೇಶಿಸಬಹುದಾದ ಮತ್ತು ಉತ್ತಮವಾಗಿ ರಕ್ಷಿಸಲ್ಪಟ್ಟ ಡಿಜಿಟಲ್ ಪರಿಸರ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ವಿಶಾಲ ದೃಷ್ಟಿಕೋನವನ್ನು ಎಂಜಿನಿಯರ್‌ಗಳು ಇಟ್ಟುಕೊಳ್ಳಬೇಕು ಎಂದರು.ಕಾರ್ಯಕ್ರಮದಲ್ಲಿ ಡೀನ್ ಡಾ.ರೇಣುಕಾಲತಾ, ಬಿಬಿಎಂ ಪ್ರಾಂಶುಪಾಲರಾದ ಡಾ. ಮಮತಾ,ಎಂಬಿಎ ಪ್ರಾಂಶುಪಾಲರಾದ ಡಾ.ಹಜ್ಮತುಲ್ಲಾ, ಸಿದ್ದಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಬಿ.ಟಿ.ಮುದ್ದೇಶ್, ದೈಹಿಕ ಶಿಕ್ಷಣ ನಿರ್ದೇಶಕರಾದ ಕೆ.ಆರ್.ರುದ್ರೇಶ್, ಎಸ್ಟೇಟ್ ಅಧಿಕಾರಿ ಡಾ.ಜಿ.ಶಿವರಾಜು, ಎನ್‌ಎಸ್‌ಎಸ್ ಅಧಿಕಾರಿ ಡಾ.ರವಿಕಿರಣ್, ಎನ್‌ಸಿಸಿ ಅಧಿಕಾರಿ ಡಾ.ಜಯಪ್ರಕಾಶ್,ವಿವಿಧ ವಿಭಾಗದ ಮುಖ್ಯಸ್ಥರು, ಎನ್.ಸಿ.ಸಿ. ಕ್ರೇಡಿಟ್ ವಿದ್ಯಾರ್ಥಿಗಳುವಿದ್ಯಾರ್ಥಿಗಳು ಉಪಸ್ಥಿತರಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.